ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಡಿಸೆಂಬರ್ 09, 2020

ಸಂಪುಟ : 47 ಸಂಚಿಕೆ : 219 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com

# ಶಾಂತಿಯುತ ಭಾರತ್ ಬಂದ್

## ದೇಶಾದ್ಯಂತ ವಾಣಿಜ್ಯ ಚಟುವಟಿಕೆ ಸ್ತಬ್ಧ

ನವದೆಹಲಿ, ಡಿ. 8 - ದೆಹಲಿಯಲ್ಲಿ ಪ್ರತಿಭಟನಾ ನಿರತ ರೈತರು ಕರೆ ನೀಡಿದ್ದ ಬಂದ್ ಹಿನ್ನೆಲೆಯಲ್ಲಿ ದೇಶಾದ್ಯಂತ ವಾಣಿಜ್ಯ ಚಟುವಟಿಕೆಗಳಿಗೆ ಅಡ್ಡಿಯಾಗಿದೆ. ರಸ್ತೆ ಸಂಚಾರ ಹಾಗೂ ಸಾರಿಗೆ ಮೇಲೆ ಪರಿಣಾಮವಾಗಿದೆ.

ತುರ್ತು ಸೇವೆಗಳಿಗೆ ಬಂದ್‌ನಿಂದ ವಿನಾಯಿತಿ ನೀಡಲಾಗಿತ್ತು. ಬ್ಯಾಂಕುಗಳು ಎಂದಿನಂತೆ ಕಾರ್ಯ ನಿರ್ವಹಿಸಿವೆ. ಪಂಜಾಬ್, ಹರಿಯಾಣ ಹಾಗೂ ಛತ್ತೀಸ್‌ಘಡಗಳಂತಹ ರಾಜ್ಯಗಳಲ್ಲಿ ಬಂದ್ ಬಿಸಿ ಹೆಚ್ಚಾಗಿತ್ತು.

ಬಂದ್ ಹಿನ್ನೆಲೆಯಲ್ಲಿ ದೇಶಾದ್ಯಂತ ಬಿಗಿ ಬಂದೋಬಸ್ತ್‌ಗೆ ಕ್ರಮ ತೆಗೆದುಕೊಳ್ಳಲಾಗಿತ್ತು. ದೇಶದ ಬಹುತೇಕ ಭಾಗಗಳಲ್ಲಿ ಬಂದ್ ಶಾಂತಿಯುತವಾಗಿತ್ತು.

ಬಂದ್ ಕೇಂದ್ರವಾಗಿದ್ದ ದೆಹಲಿಯಲ್ಲಿ ಪ್ರಮುಖ ಮಾರುಕಟ್ಟೆಗಳು ಎಂದಿನಂತೆ ಕಾರ್ಯ ನಿರ್ವಹಿಸಿವೆ. ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಗೃಹ ಬಂಧನದಲ್ಲಿರಿಸಲಾಗಿದೆ ಎಂದು ಆಮ್ ಆದ್ಮಿ ಪಾರ್ಟಿ ಆರೋಪಿಸಿತ್ತು. ಆದರೆ, ಆರೋಪವನ್ನು ನಗರ ಪೊಲೀಸರು ತಳ್ಳಿ ಹಾಕಿದ್ದಾರೆ.

ಬಂದ್ ರೈತರ ಶಕ್ತಿಯನ್ನು ತೋರಿಸಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಹನ್ನಾನ್ ಮೊಹಲ್ಲಾ ಹೇಳಿದ್ದಾರೆ.

ಮೂರು ಕಾಯ್ದೆಗಳನ್ನು ಸಂಪೂರ್ಣವಾಗಿ ವಾಪಸ್ ಪಡೆಯಬೇಕು. ನಮ್ಮ ಬೇಡಿಕೆಗಳನ್ನು ಈಡೇರಿಸದೇ ಹೋದರೆ ಹೋರಾಟವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಸಿದ್ಧ ಎಂದಿದ್ದಾರೆ.

ಪಂಜಾಬ್ ಹಾಗೂ ಹರಿಯಾಣಗಳಲ್ಲಿ ಬಂದ್ ತೀವ್ರವಾಗಿತ್ತು. ಅಂಗಡಿ - ಮುಂಗಟ್ಟುಗಳು ಮುಚ್ಚಿದ್ದವು. 3,400 ಪೆಟ್ರೋಲ್ ಪಂಪ್‌ಗಳೂ ಸಹ ಬಂದ್ ಆಗಿದ್ದವು. ಪಂಜಾಬ್‌ನ ಎಲ್ಲ ಪ್ರಮುಖ ಪಕ್ಷಗಳು (3ನೇ ಪುಟಕ್ಕೆ)

## ದಾವಣಗೆರೆಯಲ್ಲಿ ಉತ್ತಮ ಸ್ಪಂದನೆ

### ಹಲವಾರು ಸಂಘಟನೆಗಳಿಂದ ಪ್ರತಿಭಟನೆ, ರಸ್ತೆ ತಡೆ

ದಾವಣಗೆರೆ, ಡಿ.8 - ರೈತ ವಿರೋಧಿ ಕಾಯ್ದೆಗಳನ್ನು ವಿರೋಧಿಸಿ ರೈತ ಸಂಘಟನೆಗಳು ಕರೆ ನೀಡಿದ್ದ ಭಾರತ್ ಬಂದ್‌ಗೆ ನಗರದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬೆಳಿಗ್ಗೆ ಬಂದ್ ತೀವ್ರತೆ ಹೆಚ್ಚಾದಂತೆ ಕಂಡರೂ ಮಧ್ಯಾಹ್ನ 12 ಗಂಟೆ ವೇಳೆಗಾಗಲೇ ನಗರ ದೈನಂದಿನ ಚಟುವಟಿಕೆಗೆ ಮರಳಿತು.

ಜಯದೇವ ವೃತ್ತ, ಹದಡಿ ರಸ್ತೆ, ಅಶೋಕ ರಸ್ತೆ, ಪಿ.ಬಿ. ರಸ್ತೆ, ಮಂಡಿಪೇಟೆ, ಚಾಮರಾಜ ಪೇಟೆಯಲ್ಲಿ ಅಂಗಡಿ-ಮುಂಗಟ್ಟುಗಳು ಮಧ್ಯಾಹ್ನದವರೆಗೆ ಮುಚ್ಚಲ್ಪಟ್ಟಿದ್ದವು.

ಬಂದ್ ಹಿನ್ನೆಲೆಯಲ್ಲಿ ನಗರಕ್ಕೆ ಬರುವವರ ಸಂಖ್ಯೆ ಕಡಿಮೆಯಾಗಿತ್ತು. ಆಟೋಗಳು ಓಡಾಡಿದವು. ಕೆಎಸ್ಸಾರ್ಟಿಸಿ ಬಸ್ಸುಗಳೂ ಸಹ ಸೇವೆಯಲ್ಲಿ ನಿರತವಾಗಿದ್ದವು.

ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ರೈತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು ನಗರದ ಜಯದೇವ ವೃತ್ತ ಹಾಗೂ ಪಿ.ಬಿ. ರಸ್ತೆಯ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಬಳಿ ಪ್ರತಿಭಟನೆ ನಡೆಸಿದವು.

ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಮುಂಭಾಗ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ರಸ್ತೆ ತಡೆ ನಡೆಸಿದ್ದರಿಂದ ವಾಹನ ಸವಾರರು ಪರದಾಡಬೇಕಾಯಿತು. ಕನ್ನಡಪರ ಸಂಘಟನೆಗಳ ಮುಖಂಡರಾದ (2ನೇ ಪುಟಕ್ಕೆ)




ಬಂದ್ ಹಿನ್ನೆಲೆಯಲ್ಲಿ ಊರಿಗೆ ಹೋಗಲು ಬಸ್ ಇಲ್ಲದೆ ಮಗುವಿನೊಂದಿಗೆ ದಾವಣಗೆರೆ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಕಾಯುತ್ತಾ ಕುಳಿತಿದ್ದ ತಾಯಿ.

## ರಾಜ್ಯದಲ್ಲಿ ಸಿಗದ ನಿರೀಕ್ಷಿತ ಯಶಸ್ಸು

ಬೆಂಗಳೂರು, ಡಿ.8 - ಕೇಂದ್ರ ಸರ್ಕಾರ ಕೃಷಿ ಕಾನೂನುಗಳನ್ನು ಹಿಂದಕ್ಕೆ ಪಡೆಯಬೇಕೆಂದು ಕರೆ ನೀಡಲಾಗಿದ್ದ ಭಾರತ್ ಬಂದ್ ಬೆಂಬಲಿಸಿ ರಾಜ್ಯದಲ್ಲೂ ರೈತರು ಬೀದಿಗಿಳಿದರಾದರೂ ನಿರೀಕ್ಷಿತ ಯಶಸ್ಸು ದೊರೆಯಲಿಲ್ಲ.

ಬಂದ್ ಕರೆಗೆ ಸಾರ್ವಜನಿಕರು, ಸಂಘ ಸಂಸ್ಥೆಗಳು, ವಾಣಿಜ್ಯೋದ್ಯಮಗಳು ನಿರೀಕ್ಷಿತ ಪ್ರಮಾಣದಲ್ಲಿ ಕೈಜೋಡಿಸಲಿಲ್ಲ. ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ರೈತರ ಹೋರಾಟಕ್ಕೆ ಬೆಂಬಲ ನೀಡಿದರೂ ರಾಜ್ಯದ ಕೆಲವು ವೃತ್ತಗಳಲ್ಲಿ ಮುಖಂಡರ, ನಾಯಕರ ಭಾಷಣಕ್ಕೆ ಸೀಮಿತಗೊಂಡಿತು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿ ಮುಗಿದ ನಂತರ ಜೆಡಿಎಸ್ ಶಾಸಕರು ರೈತರಿಗೆ ಬೆಂಬಲ ಘೋಷಿಸಿ ಮಹಾತ್ಮ ಗಾಂಧೀ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲು ಸದನದಿಂದ ಹೊರ ನಡೆದರು.

ರೈತರು ಮತ್ತು ಕೆಲವು ಸಂಘ-ಸಂಸ್ಥೆಗಳು ಕೇವಲ ರಸ್ತೆ ರೋಕೋ, ಮೆರವಣಿಗೆ ಮತ್ತು ಕೇಂದ್ರ - ರಾಜ್ಯ ಸರ್ಕಾರಗಳ ವಿರುದ್ಧ ಸಭೆ ನಡೆಸಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸರ್ಕಾರಗಳ ವಿರುದ್ಧ ಹರಿಹಾಯ್ದರು.

ರೈತರ ಹೋರಾಟಕ್ಕೆ ಬೆಂಬಲ ನೀಡಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರು ಆ ಪಕ್ಷಗಳ ನಾಯಕರು ವಿಧಾನ ಸೌಧ ಮತ್ತು ವಿಕಾಸಸೌಧದ ನಡುವೆ ಇರುವ ಗಾಂಧೀ ಪ್ರತಿಮೆ ಬಳಿ ಕೆಲ ಕಾಲ ಧರಣಿ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತ್ರ ನಗರದ ಟೌನ್ ಹಾಲ್ ಬಳಿ ರೈತರು ಹಾಗೂ ಸಂಘ-ಸಂಸ್ಥೆಗಳು ನಡೆಸಿದ ರ್‍ಯಾಲಿಯಲ್ಲಿ ಭಾಗವಹಿಸಿ ಸರ್ಕಾರದ ಕೃಷಿ ನೀತಿಯನ್ನು ಖಂಡಿಸಿದರು. ವಿಧಾನ ಮಂಡಲದ (2ನೇ ಪುಟಕ್ಕೆ)





ಕೇಂದ್ರ ಸರ್ಕಾರದ ಕಾಯ್ದೆಗಳನ್ನು ವಿರೋಧಿಸಿ ಕರೆ ನೀಡಿದ್ದ ಭಾರತ್ ಬಂದ್ ಹಿನ್ನೆಲೆಯಲ್ಲಿ ದಾವಣಗೆರೆ ಜಯದೇವ ವೃತ್ತದಲ್ಲಿ ವಿವಿಧ ಸಂಘಟನೆಗಳಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

**ಖಾಲಿ ತಟ್ಟೆ, ಖಾಲಿ ಲೋಟ ಪ್ರದರ್ಶಿಸಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್,**

**ಆಹಾರದ ಪೊಟ್ಟಣ ನೀಡಿ ಬಂದ್ ಗೆ ಸಹಕರಿಸಲು ಕೋರಿದ ರೈತ ಮುಖಂಡ ತೇಜಸ್ವಿ ಪಟೇಲ್**

**ಕಾರ್ಮಿಕ ಸಂಘಟನೆ, ರೈತ ಸಂಘಟನೆಗಳಿಂದ ರಸ್ತೆ ತಡೆ.**

## ಭೂ ಸುಧಾರಣಾ ಮಸೂದೆಗೆ ಪರಿಷತ್ ಒಪ್ಪಿಗೆ

**ವಿವಾದಿತ ಮಸೂದೆಗೆ ಜೆಡಿಎಸ್ ಬೆಂಬಲ**

ಬೆಂಗಳೂರು, ಡಿ. 8 – ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ದೇಶಾದ್ಯಂತ ಬಂದ್ ನಡೆದ ದಿನವೇ, ರಾಜ್ಯ ಸರ್ಕಾರ ವಿವಾದಿತ ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಮಸೂದೆಗೆ ವಿಧಾನ ಪರಿಷತ್‌ನಲ್ಲಿ ಅಂಗೀಕಾರ ಪಡೆದುಕೊಂಡಿದೆ.

ಈ ಹಿಂದೆ ಕೃಷಿ ಹಿನ್ನೆಲೆಯವರು ಮಾತ್ರ ಜಮೀನು ಖರೀದಿಸಬಹುದಿತ್ತು. ಆ ನಿರ್ಬಂಧ ಸಡಿಲಿಸಲು ಮಸೂದೆ ಉದ್ದೇಶಿಸಿದೆ. ಜೆಡಿಎಸ್ ಮಸೂದೆಗೆ ಬೆಂಬಲಿಸಿದ ಕಾರಣ ಅಂಗೀಕಾರ ಪಡೆಯಲು ಸಾಧ್ಯವಾಗಿದೆ.

ಈ ಹಿಂದೆ ತಿದ್ದುಪಡಿ ವಿರೋಧಿಸಿದ್ದ ಜೆಡಿಎಸ್, ಪರಿಷತ್‌ನಲ್ಲಿ ಬೆಂಬಲ ನೀಡಿದ ಕಾರಣ ಮಸೂದೆ ಅಂಗೀಕಾರಗೊಂಡಿದೆ. ಈ ಹಿಂದೆ ಕಾಂಗ್ರೆಸ್ ಹಾಗೂ ಜೆಡಿಎಸ್ ಎರಡೂ ಮಸೂದೆಗಳನ್ನು ವಿರೋಧಿಸಿದ ಕಾರಣ ಮುಂಗಾರು ಅಧಿವೇಶನದಲ್ಲಿ ಅಂಗೀಕಾರ ಪಡೆಯಲು ಸಾಧ್ಯವಾಗಿರಲಿಲ್ಲ.

ಸೋಮವಾರ ಆರಂಭವಾದ ಅಧಿವೇಶನದಲ್ಲಿ ಕಂದಾಯ ಸಚಿವ ಆರ್. ಅಶೋಕ ಅವರು ಮತ್ತೆ ಪರಿಷ್ಕೃತ ಮಸೂದೆ ಮಂಡಿಸಿದ್ದರು.

ಮಸೂದೆಯ ಕುರಿತು ವಿಸ್ತೃತ ಚರ್ಚೆ ಆಗಬೇಕೆಂದು ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಚರ್ಚೆಯ ನಂತರ ಮಂಗಳವಾರ ಮಸೂದೆಯನ್ನು ಮತಕ್ಕೆ ಹಾಕಲಾಯಿತು. ವಿಧೇಯಕದ ಪರವಾಗಿ 31 ಮತ ಹಾಗೂ ವಿರುದ್ಧವಾಗಿ 21 ಮತಗಳು ಚಲಾವಣೆಯಾಗಿದ್ದು, ಜೆಡಿಎಸ್ ಬೆಂಬಲದೊಂದಿಗೆ ಮಸೂದೆ ಅಂಗೀಕರಿಸಲಾಗಿದೆ. ಇದರೊಂದಿಗೆ ಭೂಮಿ ಮಾರಲು ಹಾಗೂ ಖರೀದಿಸಲು ಇದ್ದ ದೊಡ್ಡ ಬೇಲಿಯೊಂದನ್ನು ಕಿತ್ತು ಹಾಕಿದಂತಾಗಿದ್ದು, ಇನ್ನು ಮುಂದೆ ಯಾರು (3ನೇ ಪುಟಕ್ಕೆ)

## ಬೇಡಿಕೆ ಈಡೇರದಿದ್ದರೆ ವಿಧಾನಸೌಧ ಮುತ್ತಿಗೆ, ಆಮರಣಾಂತ ಉಪವಾಸ

### ಪಂಚಮಸಾಲಿ ಅಲ್ಲದೇ ಎಲ್ಲಾ ಒಳಪಂಗಡಗಳ ಮೀಸಲಾತಿಗೆ ಪಾದಯಾತ್ರೆ




ದಾವಣಗೆರೆ, ಡಿ. 8 - ಲಿಂಗಾಯತ ಪಂಚಮಸಾಲಿಗಳಷ್ಟೇ ಅಲ್ಲದೇ ಲಿಂಗಾಯತರ ಎಲ್ಲ ಒಳಪಂಗಡಗಳಿಗೆ ರಾಜ್ಯದಲ್ಲಿ 2ಎ ಮೀಸಲಾತಿ ಕಲ್ಪಿಸಬೇಕು ಮತ್ತು ಕೇಂದ್ರದಲ್ಲಿ ಒ.ಬಿ.ಸಿ. ಮೀಸಲಾತಿ ಕಲ್ಪಿಸಬೇಕೆಂದು ಒತ್ತಾಯಿಸಿ ಕೂಡಲ ಸಂಗಮದಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಲಾಗುವುದು ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕೂಡಲಸಂ ಗಮದಲ್ಲಿ ತಾವು ಉಪವಾಸ ಮಾಡುತ್ತಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ದೂರವಾಣಿ ಮೂಲಕ ಮೀಸಲಾತಿಯ ಭರವಸೆ ನೀಡಿದ್ದರು. ಯಡಿಯೂರಪ್ಪ ಅವರು ಈಗ ಕೊಟ್ಟ ಮಾತು ಉಳಿಸಿಕೊಳ್ಳಬೇಕೆಂದು ಸ್ವಾಮೀಜಿ ಆಗ್ರಹಿಸಿದ್ದಾರೆ.

ಲಿಂಗಾಯತರ 32 ಒಳಪಂಗಡಗಳಿಗೆ 2ಎ ಮೀಸಲಾತಿ ಶಿಫಾರಸ್ಸು ಆಗಿದ್ದರೂ ಬಾಕಿ ಉಳಿದಿದೆ. (3ನೇ ಪುಟಕ್ಕೆ)

## ಹೆದ್ದಾರಿ ವಿಸ್ತರಣೆಗೆ ಕೇಂದ್ರ ಪರಿಸರ ಇಲಾಖೆ ಅನುಮತಿ ಪಡೆಯಬೇಕಿಲ್ಲ



ನವದೆಹಲಿ, ಡಿ. 8 – ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಕೇಂದ್ರ ಸರ್ಕಾರ ಪರಿಸರ ಇಲ್ಲವೇ ಅರಣ್ಯ ಇಲಾಖೆಯ ಪೂರ್ವಾನುಮತಿ ಪಡೆಯಬೇಕಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಮಹತ್ವದ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್, ಹೆದ್ದಾರಿಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಪೂರ್ವಾನುಮತಿಯ ಅಗತ್ಯವಿಲ್ಲ ಎಂದು ಹೇಳಿದೆ. ಚೆನ್ನೈ - ಸೇಲಂ ನಡುವಿನ ಎಂಟು ಪಥದ ಗ್ರೀನ್ ಕಾರಿಡಾರ್ ಯೋಜನೆಗೆ ಜಮೀನು ವಶದ ಅಧಿಸೂಚನೆ ಹೊರಡಿಸಿದ್ದನ್ನು ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಗಳ ವಿಚಾರಣೆ ವೇಳೆ ಈ ತೀರ್ಪು ನೀಡಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956, ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1957 ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಾಯ್ದೆ 1988 ಆಧಾರದ ಮೇಲೆ ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ಬಿ.ಆರ್. ಗವಾಯಿ ಹಾಗೂ ಕೃಷ್ಣ ಮುರಾರಿ ಅವರನ್ನು ಒಳಗೊಂಡ ಪೀಠ ಈ ತೀರ್ಪು ನೀಡಿದೆ. ಏಪ್ರಿಲ್ 8, (3ನೇ ಪುಟಕ್ಕೆ)

## ಹುಕ್ಕಾಬಾರ್ ಮುಚ್ಚಿಸುತ್ತೇವೆ: ಬೊಮ್ಮಾಯಿ

ಬೆಂಗಳೂರು, ಡಿ.8 - ಯುವ ಜನಾಂಗ ವನ್ನು ದಾರಿ ತಪ್ಪಿಸುತ್ತಿರುವ ಹುಕ್ಕಾಬಾರ್ ಸೇರಿದಂತೆ ಮನರಂಜನಾ ಕೇಂದ್ರಗಳನ್ನು ಮುಚ್ಚಿಸುವುದಾಗಿ ಗೃಹ ಸಚಿವ ಬಸವರಾಜ್ ಬೊಮ್ಮಾಯಿ ವಿಧಾನಸಭೆಯಲ್ಲಿ ಹೇಳಿದರು.

ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಈಶ್ವರ್ ಖಂಡ್ರೆ ಮಾಡಿದ ಪ್ರಸ್ತಾಪಕ್ಕೆ ಹಲವು ಸದಸ್ಯರು ಮಾದಕ ದ್ರವ್ಯಗಳ ಸೇವನೆ ತಡೆಗಟ್ಟಲು ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ಗೃಹ ಸಚಿವರು, ಬೆಂಗಳೂರು ಮತ್ತು ಮೈಸೂರಿನಲ್ಲಿ ಹುಕ್ಕಾಬಾರ್‌ಗಳು ತಲೆ ಎತ್ತಿ ಯುವಕರು ಮಾದಕ ವ್ಯಸನಿಗಳಾಗಲು (2ನೇ ಪುಟಕ್ಕೆ)

## ಕೃಷಿಕರ ಆದಾಯ ಹೆಚ್ಚಳಕ್ಕೆ ನೂತನ ಕಾಯ್ದೆಗಳ ನೆರವು

### ಬಂದ್‌ಗೆ ಜನರ ಸ್ಪಂದನೆ ದೊರೆತಿಲ್ಲ: ಸಿಎಂ

ಬೆಂಗಳೂರು, ಡಿ.8 - ಕೃಷಿಕನ ಆದಾಯ ಹೆಚ್ಚಿಸಲು ನೂತನ ಕಾಯ್ದೆಗಳು ನೆರವಾಗಲಿವೆ ಎಂದು ಸಮರ್ಥನೆ ಮಾಡಿಕೊಂಡಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ನಿಮ್ಮನ್ನು ಬಳಸಿ ರಾಜಕೀಯ ಮಾಡಲು ಹೊರಟಿರುವವರಿಗೆ ಬೆಲೆ ಕೊಡಬೇಡಿ ಎಂದು ರೈತರಿಗೆ ಕಿವಿ ಮಾತು ಹೇಳಿದ್ದಾರೆ.

ವಿಧಾನ ಮಂಡಲದ ಅಧಿವೇಶನದಲ್ಲಿ (2ನೇ ಪುಟಕ್ಕೆ)

## ರಾಜ್ಯ ಬೀಜ ನಿಗಮ : ರಾಜೇಂದ್ರ ಪ್ರಸಾದ್ ಅತ್ಯಧಿಕ ಮತಗಳಿಂದ 4ನೇ ಬಾರಿಗೆ ಆಯ್ಕೆ



ದಾವಣಗೆರೆ, ಡಿ.8 - ಕರ್ನಾಟಕ ರಾಜ್ಯ ಬೀಜ ನಿಗಮದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ವಲಯ - 2 ರಿಂದ ಸಾವಜ್ಜಿ ರಾಜೇಂದ್ರ ಪ್ರಸಾದ್ ಅವರು ಭಾರೀ ಮತಗಳ ಅಂತರದಿಂದ ಜಯ ಗಳಿಸಿದ್ದು, ಸತತ 4ನೇ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಬೀಜ ನಿಗಮದ ಆಡಳಿತ ಮಂಡಳಿಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ತಲಾ ಮೂವರಂತೆ ಆರು ಅಧಿಕಾರಿಗಳು, ಸರ್ಕಾರದಿಂದ ನಾಮ ನಿರ್ದೇಶಿತಗೊಳ್ಳುವ (2ನೇ ಪುಟಕ್ಕೆ)

## ಮೌಂಟ್ ಎವರೆಸ್ಟ್‌ನ ಎತ್ತರ 8,848.86 ಮೀ.

ಕಠ್ಮಂಡು/ಬೀಜಿಂಗ್, ಡಿ. 8 - ನೇಪಾಳ ಹಾಗೂ ಚೀನಾಗಳು ಜಂಟಿಯಾಗಿ ವಿಶ್ವದ ಅತಿ ಎತ್ತರದ ಶಿಖರವಾದ ಮೌಂಟ್ ಎವರೆಸ್ಟ್ ಅಳತೆ ಮಾಡಿದ್ದು, ಇದರ ಎತ್ತರ 8,848.86 ಮೀಟರ್ ಎಂದು ತಿಳಿಸಿವೆ. ಈ ಹಿಂದೆ 1954ರಲ್ಲಿ ಭಾರತ ಎವರೆಸ್ಟ್ ಶಿಖರ ಅಳತೆ ಮಾಡಿದ್ದಕ್ಕಿಂತ ಈ ಬಾರಿ 86 ಸೆಂ.ಮೀ. ಎತ್ತರ ಹೆಚ್ಚಾಗಿದೆ.

2015ರಲ್ಲಿ ಸಂಭವಿಸಿದ ಭೀಕರ ಭೂಕಂಪ ಸೇರಿದಂತೆ ಹಲವಾರು ಕಾರಣಗಳಿಂದ ಮೌಂಟ್ ಎವರೆಸ್ಟ್ ಎತ್ತರ ಬದಲಾಗಿರಬಹುದು ಎಂಬ ವರದಿಗಳ ಹಿನ್ನೆಲೆಯಲ್ಲಿ ಮರು ಅಳತೆಗೆ ನೇಪಾಳ ಸರ್ಕಾರ ನಿರ್ಧರಿಸಿತ್ತು.

ಎವರೆಸ್ಟ್‌ನ ನೂತನ ಎತ್ತರ 8,848.86 ಮೀಟರ್ ಎಂದು ಚೀನಾ ಹಾಗೂ ನೇಪಾಳ ಜಂಟಿಯಾಗಿ ಘೋಷಿಸಿರುವುದಾಗಿ ಚೀನಾದ ಸರ್ಕಾರಿ ಸುದ್ದಿ ಸಂಸ್ಥೆಯಾದ ಜಿನುವಾ ವರದಿ ಮಾಡಿದೆ.

ಈ ಹಿಂದೆ ಭಾರತೀಯ ಪುರಾತತ್ವ ಇಲಾಖೆ 1954ರಲ್ಲಿ ಅಳತೆ ಮಾಡಿದಾಗ ಎವರೆಸ್ಟ್ ಎತ್ತರ 8,848 ಮೀಟರ್ ಆಗಿತ್ತು.



**ಸೈಟ್‌ಗಳು ಮಾರಾಟಕ್ಕಿವೆ**
ನವೋದಯ ಸ್ಕೂಲ್ ಹತ್ತಿರ, ಮಹಾಲಕ್ಷ್ಮಿ ಲೇಔಟ್‌ನಲ್ಲಿ
30x50 South, 30x40 North, 30x50 East, 30x40 South, 30x40 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 40x50 ಪೂರ್ವ, 30x40 ಪಶ್ಚಿಮ, ಶಿವ-ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, 14 ಸಾವಿರ ಅಡಿ ದೇವರಬೆಳಕೆರೆ ರಸ್ತೆಯಲ್ಲಿ ಬಾಡಿಗೆಗೆ ಇದೆ. ಹೈಟೆಕ್ ಬಡಾವಣೆಯಲ್ಲಿ 30x50 ಪಶ್ಚಿಮ
ಶಾಮನೂರು ಧನ್ಯಕುಮಾರ್
ಮೊ. 97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
ಮೊ. 97421 44715

**ಮನೆಗಳು ಬಾಡಿಗೆಗಿವೆ**
ದಾವಣಗೆರೆ ದೇವರಾಜ ಅರಸು ಬಡಾವಣೆ, ಇಡಬ್ಲ್ಯೂಎಸ್ ಕಾಲೋನಿ, 1ನೇ ಮೇನ್, 2ನೇ ಕ್ರಾಸ್, ಶಿವಾಲಿ ಟಾಕೀಸ್ ಹತ್ತಿರವಿರುವ ನೆಲಮಹಡಿ, 1ನೇ ಮಹಡಿ, 2ನೇ ಮಹಡಿಗಳುಳ್ಳ 15×30 ಅಳತೆಯ 4 ಮನೆಗಳು ಬಾಡಿಗೆಗಿವೆ.
ಎನ್.ಕೆ. ದ್ರೋಣಾಚಾರಿ
ಮೊ.: 99868 69023

**ಸೈಟ್‌ಗಳು ಮಾರಾಟಕ್ಕಿವೆ**
60x40 North, 60x40 West 60x40 East, 80x60 East
ವಿನಾಯಕ ಬಡಾವಣೆ, ಸಿದ್ದವೀರಪ್ಪ ಬಡಾವಣೆ, ಎಸ್. ಎಸ್. 'ಎ' ಬ್ಲಾಕ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ ಇವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x56 ಪೂರ್ವ, 30x48 ಪೂರ್ವ. ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪೂರ್ವ, 20x30 ದಕ್ಷಿಣ. ವಿನಾಯಕ ಬಡಾವಣೆಯಲ್ಲಿ 30x36 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715
ಶಾಮನೂರು ನಾಗರಾಜ 98448 83303

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 28×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, KHB ಕಾಲೋನಿ, 30×40 ಪೂರ್ವ ದಿಕ್ಕು ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ, ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
ಭಟ್ಟರು ಮತ್ತು ಕೌಂಟರ್ ಕೆಲಸಕ್ಕೆ ಹುಡುಗರು ಹಾಗೂ ಮಹಿಳೆಯರು ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
70193 10599

**ಟೀಚರ್ ಬೇಕಾಗಿದ್ದಾರೆ**
ತ್ರಿಶೂಲ್ ಟಾಕೀಸ್ ಹತ್ತಿರದ ಮನೆಯಲ್ಲಿ ICSE 4th Std. ಓದುತ್ತಿರುವ ಮಗುವಿಗೆ ಮನೆಯಲ್ಲಿ ಪಾಠ ಮಾಡಲು Experienced Teacher (B.Sc.) ಬೇಕಾಗಿದ್ದಾರೆ. ಸಮಯ : 3 pm ರಿಂದ 5 pm.
ಮೊ.: 98807 39392

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ. ಕಾರ್ ಡ್ರೈವಿಂಗ್ ಬರುವವರಿಗೆ ಮೊದಲ ಆದ್ಯತೆ. ಸಂಬಳ : 9000/-
ನಂದಿ ಟೈರ್ ಪ್ಲಾನೆಟ್
95381 87385, 99161 43003
08192 261003

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**Spar Sunshine**
ಜರ್ಮನ್ ತಂತ್ರಜ್ಞಾನದ ಸೌರ ಮೇಲ್ಛಾವಣಿಯನ್ನು ಮಾಡಿಕೊಡುತ್ತೇವೆ. ಇದು ಮನೆ, ಮಿಲ್, ಇಂಡಸ್ಟ್ರಿ, ಹಾಸ್ಪಿಟಲ್‌ಗೆ ಉಪಯೋಗವಾಗುತ್ತದೆ.
1. ಶಾಶ್ವತವಾಗಿ ನಿಮ್ಮ ವಿದ್ಯುತ್ ಬಿಲ್ಲನ್ನು ಉಳಿಸಿ.
2. ಹೆಚ್ಚುವರಿ ವಿದ್ಯುತ್‌ನಿಂದ ಲಾಭ ಗಳಿಸಿ.
63605 91025

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ: ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**TO-LET**
2 BHK House & Shop at P.J. Extn ( ideal for clinic) is Available
Contact:
76764 92366

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕಂಪನಿಗೆ ITI ಆದವರು ಕೆಲಸ ಮಾಡಲು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ
Laxmi HRD
+91 91135 92331

**ಸೇಲ್ಸ್ ಮನ್ ಬೇಕಾಗಿದ್ದಾರೆ**
ರೆಡಿ ಬಿರಿಯಾನಿಯನ್ನು ಡೋರ್ ಟು ಡೋರ್ ಸೇಲ್ ಮಾಡಲು ಸೇಲ್ಸ್ ಮನ್ ಬೇಕಾಗಿದ್ದಾರೆ. *ಸಂಪರ್ಕಿಸಿ :*
ಮೊ. 91640 97805

**ಬೇಕಾಗಿದ್ದಾರೆ**
ನುರಿತ ಕೋರಲ್ ಡ್ರಾ, ಫೋಟೋ ಶಾಪ್, ಡಿಸೈನಿಂಗ್ ಹಾಗೂ ಟೈಪಿಂಗ್ ಅನುಭವ ಇರುವವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
ರಾಜು ಪ್ರಿಂಟರ್ಸ್, ದಾವಣಗೆರೆ.
9964028818, 9742774340

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ ಬಡಾವಣೆ ಹಾಗೂ ಶಾಮನೂರು, ಜೆ.ಹೆಚ್ ಪಟೇಲ್ ಲೇಔಟ್, ಸರಸ್ವತಿ ನಗರ 40x68 ಉತ್ತರಕ್ಕೆ ಸೈಟ್ ಮಾರಾಟಕ್ಕಿದೆ, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್ ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಲ್ಟೇರ್, ಏಜೆಂಟ್
ಮೊ.97315 12365

**ಜಮೀನು ಬೇಕಾಗಿದೆ**
ದಾವಣಗೆರೆ ಸುತ್ತ ಬೆದ್ದಲು ಜಮೀನು ಬೇಕಾಗಿದೆ.
94480 41500

**ಮನೆ ಬಾಡಿಗೆಗೆ ಇವೆ**
# 34,42, 5ನೇ ಕ್ರಾಸ್, 6ನೇ ಕ್ರಾಸ್ 'ಎ' ಬ್ಲಾಕ್, ದೇವರಾಜ ಅರಸ್ ಬಡಾವಣೆ, ಹೊಸ ಕೋರ್ಟ್ ಹಿಂಭಾಗ, ಬೋರ್/ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ. 2ಬೆಡ್ ರೂಂ, ಎಕ್ಸ್ಟ್ರಾ 1 ರೂಂ ಇದೆ.
94492 46224
79751 22289

**TIRUU FILM INSTITUTE**
Acting Course-5000/-
Direction Course-6000/-
Editing Course-7000/-
50% Online Classes
For Details Whatsapp
91104 16055, 63632 18756

**ಬೇಕಾಗಿದ್ದಾರೆ**
ಅಶೋಕ ರಸ್ತೆಯ ಲಾಡ್ಜ್‌ವೊಂದರಲ್ಲಿ ರಾತ್ರಿ ವೇಳೆಯಲ್ಲಿ ರೂಂ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ:
99801 11370
78928 77631

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಶಿವಾಜಿ ನಗರ, ದುರ್ಗಮ್ಮನ ದೇವಸ್ಥಾನದ ಹತ್ತಿರ, ದಿಳ್ಳೆಪ್ಪನ ಗಲ್ಲಿಯಲ್ಲಿ (# 364/1) 'ಶ್ರೀ ನಿಧಿ ನಿವಾಸ'ದ ಮೊದಲನೇ ಮಹಡಿಯಲ್ಲಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
(ಸಸ್ಯಹಾರಿಗಳಿಗೆ ಮಾತ್ರ)
ಮೊ. : 94820 68652

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ Sales girls / Sales boys ಬೇಕಾಗಿದ್ದಾರೆ.
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1

ಉತ್ತಮ ಗುಣಮಟ್ಟದ ಕಡಿಮೆ ದರದಲ್ಲಿ ಎಂ.ಸ್ಯಾಂಡ್, ಜಲ್ಲಿ, ಗ್ರಾವೆಲ್ ದೊರೆಯುತ್ತದೆ.
ಸಂಪರ್ಕಿಸಿ:
ಪ್ರವೀಣ್‌ಕುಮಾರ್ ಎಸ್.ಕೆ.
90604 55766

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು
(ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಫರ್ನೀಚರ್ಸ್ ಮಾರಾಟಕ್ಕಿವೆ**
ಮಂಡಿಪೇಟೆಯಲ್ಲಿರುವ ಬಂಗಾರದ ಅಂಗಡಿಗೆ ಸಂಬಂಧಿಸಿದ ಶೋಕೇಸ್ ಮತ್ತು ಫರ್ನೀಚರ್ಸ್ ಮಾರಾಟಕ್ಕಿವೆ.
ಸಂಪರ್ಕಿಸಿ : 98451-51179
99451-99770

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಜಮೀನು ಮಾರಾಟಕ್ಕಿದೆ**
ತೆಲಗಿ ಹತ್ತಿರ ಹರಪನಹಳ್ಳಿ ರಸ್ತೆಗೆ @ Rs 18 ಲಕ್ಷ ಎಕರೆಗೆ
74112 50447

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಹರಿಹರ- ದಾವಣಗೆರೆ
74112 50447

**REQUIRED MANAGER FOR INDIA'S MOST TRUSTED COMPANY**
MALE / FEMALE
Qualification : Any Degree
Age Limit : 25 to 35 years
Location : Davanagere & Ranebennuru
For more details kindly Contact
78295 17876
*Hurry Up Limited Openings*

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಮನೆ ಬಾಡಿಗೆಗೆ ಇದೆ**
ನಂ. S 201, ವಿದ್ಯಾನಗರ ಕೊನೆ ಬಸ್‌ಸ್ಟಾಪ್, ಶ್ರೀ ಕಲ್ಲೇಶ್ವರ ಅಲೈಟ್ ಅಪಾರ್ಟ್‌ಮೆಂಟ್‌ನಲ್ಲಿ ಮೊದಲನೇ ಮಹಡಿಯಲ್ಲಿ ಎಲ್ಲಾ ಸೌಕರ್ಯವುಳ್ಳ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿರಿ :
ಕೆಂಚನಗೌಡ, 94480 32210

**Simple vaastu**
ಸಿಂಪಲ್ ವಾಸ್ತು
98444 88838

**ಬಾಡಿಗೆಗೆ ಬೇಕಾಗಿದೆ**
ದಾವಣಗೆರೆಯ ಎನ್‌ಹೆಚ್-4 ರಸ್ತೆಯ ಕಾಫೀ ಡೇಯಿಂದ ಹರಿಹರದ ವರೆಗಿನ ಭಾಗದಲ್ಲಿ ಒಂದು ಎಕರೆ ಖಾಲಿ ಜಾಗ ಬಾಡಿಗೆಗೆ ಬೇಕಾಗಿದೆ.
ಸಂಪರ್ಕಿಸಿ:
7411779912


# ರೈತರ ಬಂದ್ ಕರೆಗೆ ಹರಿಹರದಲ್ಲಿ ನೀರಸ ಪ್ರತಿಕ್ರಿಯೆ

ಹರಿಹರ, ಡಿ.8- ಕೇಂದ್ರ ಸರ್ಕಾರದ ಕೃಷಿ ನೀತಿ ವಿರೋಧಿಸಿ ರೈತ ಸಂಘಟನೆಯವರು ಕರೆದಿದ್ದ ಭಾರತ್ ಬಂದ್‌ಗೆ ನಗರದಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ರೈತ ಸಂಘಟನೆಯವರ ನೇತೃತ್ವದಲ್ಲಿ ನಡೆಯುತ್ತಿರುವ ಬಂದ್‌ಗೆ ಕಾಂಗ್ರೆಸ್ ಪಕ್ಷದ ಮುಖಂಡರು ಬೆಂಬಲ ನೀಡಿದ್ದು, ವ್ಯಾಪಾರ ವಹಿವಾಟು ನಡೆಸುತ್ತಿದ್ದ ಅಂಗಡಿ ಮುಂಗಟ್ಟನ್ನು ಬೆಳಗ್ಗೆಯಿಂದಲೇ ಬಂದ್ ಮಾಡುವಂತೆ ಮನವಿ ಮಾಡಿಕೊಂಡರು.

ಪ್ರತಿಭಟನಾಕಾರರು ವಹಿವಾಟು ಬಂದ್ ಮಾಡಿಸಿ, ಮುಂದೆ ಹೋಗುತ್ತಿದ್ದಂತೆ ಮತ್ತೆ ತಮ್ಮ ತಮ್ಮ ಅಂಗಡಿಗಳನ್ನು ತೆರೆದು ಮಾಮೂಲಿಯಂತೆ ವ್ಯಾಪಾರ, ವಹಿವಾಟು ನಡೆಸಿದರು.

ಸರ್ಕಾರಿ ಕಚೇರಿಗಳಾದ ನಗರಸಭೆ, ತಹಶೀಲ್ದಾರ್ ಕಚೇರಿ, ಕೆ.ಇ.ಬಿ. ಶಿಕ್ಷಣ ಇಲಾಖೆ, ಇಓ ಕಚೇರಿ, ಆರೋಗ್ಯ ಇಲಾಖೆ ಮತ್ತು ಸರ್ಕಾರಿ ಮತ್ತು ಖಾಸಗಿ ಬ್ಯಾಂಕುಗಳು, ಪೆಟ್ರೋಲ್ ಬಂಕ್, ಔಷಧಿ ಅಂಗಡಿ, ಆಸ್ಪತ್ರೆ, ಆಟೋಮೊಬೈಲ್, ಇವುಗಳು ಎಂದಿನಂತೆ ತೆರೆದಿದ್ದವು.

ಆಟೋ, ಟ್ಯಾಕ್ಸಿ, ಬಸ್ ಓಡಾಟ ಎಂದಿನಂತೆ ಇತ್ತು. ಹಲವು ವ್ಯಾಪಾರಿ ಕೇಂದ್ರಗಳು ಎಂದಿನಂತೆ ತೆರೆದುಕೊಂಡು ದಿನ ನಿತ್ಯದಂತೆ ವ್ಯಾಪಾರ ವಹಿವಾಟು ನಡೆಸಿದವು.



ಇಂದು ಮಂಗಳವಾರ ಸಂತೆಯ ದಿನವಾಗಿದ್ದರಿಂದ ಶಿವಮೊಗ್ಗ ರಸ್ತೆ ಮತ್ತು ದೊಡ್ಡಬೀದಿ ಸಂತೆ ಎಂದಿನಂತೆ ನಡೆಯಿತು. ಗ್ರಾಮೀಣ ಪ್ರದೇಶದ ಜನರು ಆಗಮಿಸದೇ ಇರುವುದರಿಂದ ಜನಸಂದಣಿ ಕಡಿಮೆ ಇತ್ತು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಕೆ.ವಿ. ರುದ್ರಮುನಿ, ಹಾಳೂರು ನಾಗರಾಜ್, ಭಾನುವಳ್ಳಿ ಪ್ರಕಾಶ್, ಚಂದ್ರಪ್ಪ ಅಮರಾವತಿ, ನಗರಸಭೆ ಸದಸ್ಯ ಶಂಕರ್ ಖಟಾವ್‌ಕರ್, ಎಪಿಎಂಸಿ ಸದಸ್ಯ ಮಂಜುನಾಥ್ ಪಟೇಲ್ ಕೊಮಾರನಹಳ್ಳಿ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಮಲೇಬೆನ್ನೂರಿನ ಎಂ.ಬಿ. ಅಬೀದ್ ಅಲಿ, ಯಲವಟ್ಟಿ ನಾಯಕ್, ರೇವಣಸಿದ್ದಪ್ಪ ಹನಗವಾಡಿ, ಪ್ರಕಾಶ್ ಹನಗವಾಡಿ, ಹೆಚ್.ಕೆ. ತಿಪ್ಪೇಸ್ವಾಮಿ, ಡಿ.ಜಿ. ಷಣ್ಮುಖಪ್ಪ, ಮಹೇಶ್ವರಪ್ಪ ಕೆಂಚನಹಳ್ಳಿ, ಶೇಖರಪ್ಪ, ನಾರಪ್ಪ, ಅಮರಾವತಿ ನಾಗರಾಜ್, ಎಲ್.ಬಿ. ಹನುಮಂತಪ್ಪ, ನಸ್ರುಲ್ಲಾ, ಗೋಣೆಪ್ಪ, ಆನಂದ್, ಸಿ.ಎನ್. ಹುಲಗೇಶ್, ಭಾಗ್ಯದೇವಿ, ಜೈ. ಶಂಕರ್, ಹನುಮಂತಪ್ಪ, ಪೈ. ದಾದಾಪೀರ್, ಮಹಬೂಬ್ ಬಾಷಾ ಇನ್ನಿತರರಿದ್ದರು.

# ಭಾರತ್ ಬಂದ್‌ಗೆ ದಾವಣಗೆರೆಯಲ್ಲಿ ಉತ್ತಮ ಸ್ಪಂದನೆ

(1ನೇ ಪುಟದಿಂದ) ಸುರೇಶ ಐಗೂರು, ರೈತ ಮುಖಂಡ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ ಪ್ರಧಾನಿ ಮೋದಿ ಭಾವಚಿತ್ರ ದಹಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹುಚ್ಚವ್ವನಹಳ್ಳಿ ಮಂಜುನಾಥ ಬಣ ಹದಡಿ ರಸ್ತೆಯ ಐಟಿಐ ಕಾಲೇಜ್ ಬಳಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿತು.

ಬಸ್‌ನಿಲ್ದಾಣದ ಬಳಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಮುನಿಯಪ್ಪ, ಚಿನ್ನಸಮುದ್ರದ ಶೇಖರನಾಯ್ಕ, ಕಮ್ಯುನಿಸ್ಟ್ ಪಕ್ಷದ ಮುಖಂಡರಾದ ಆವರಗೆರೆ ಚಂದ್ರು, ಆವರಗೆರೆ ವಾಸು, ಐರಣಿ ಚಂದ್ರು, ವಿವಿಧ ಸಂಘಟನೆಗಳ ಮುಖಂಡರಾದ ಜಬೀನಾ ಖಾನಂ, ಮಂಜುನಾಥ ಕೈದಾಳೆ, ಕೆರನಹಳ್ಳಿ ರಾಜು, ರುದ್ರೇಶ್ ಮಳಲಕೆರೆ, ತಿಪ್ಪೇಶ್, ಟಿ.ಎಸ್. ನಾಗರಾಜ್, ಹುಚ್ಚವ್ವನಹಳ್ಳಿ ಬಸವರಾಜ್, ರಂಗನಾಥ ಮತ್ತಿತರರು ಭಾಗವಹಿಸಿದ್ದರು. ವಿದ್ಯಾರ್ಥಿ ಸಂಘಟನೆಗಳ ಸ್ಮಿತಾ, ಸೌಮ್ಯ, ನಾಗಲಕ್ಷ್ಮಿ ಅವರು ಕ್ರಾಂತಿ ಗೀತೆಗಳನ್ನು ಹೇಳುವ ಮೂಲಕ ಜನರ ಗಮನಸೆಳೆದರು.

ದಾವಣಗೆರೆ ಜಿಲ್ಲಾ ಕನ್ನಡ ಪರ ಸಂಘ-ಸಂಸ್ಥೆಗಳ ಒಕ್ಕೂಟದದಿಂದ ಕೈಗಾಡಿಯಲ್ಲಿ ಪ್ರಧಾನಿ ಮೋದಿ ಅವರ ಪ್ರತಿರೂಪ ಮಾಡಿ, ಕೇಂದ್ರ ಸರ್ಕಾರ ತಂದಿರುವ ರೈತ ವಿರೋಧಿ ಕಾಯ್ದೆಗಳ ಫಲಕ ಹಾಕಿ ಪ್ರತಿಭಟನೆ ನಡೆಸಲಾಯಿತು.

ದಾವಣಗೆರೆ ಜಿಲ್ಲಾ ಕನ್ನಡ ಪರ ಸಂಘ-ಸಂಸ್ಥೆಗಳ ಒಕ್ಕೂಟದ ಗೌರವಾಧ್ಯಕ್ಷ ಕೆ.ಜಿ. ಯಲ್ಲಪ್ಪ, ಅಧ್ಯಕ್ಷ ಎನ್.ಹೆಚ್. ಹಾಲೇಶ್, ವಿ . ಅವಿನಾಶ್ (ಅಭಿ) ರಾಜು ಎಸ್., ವಾಸುದೇವ್ , ಸುಧಾಕರ್, ಕೆ.ಎನ್. ವೆಂಕಟೇಶ್, ಮಹಮ್ಮದ್ ಅಸ್ಲಾಂ (ಟಾರ್ಗೆಟ್), ನಾಗೇಂದ್ರ ಬಂಡೀಕರ್, ಐಗೂರು ಸುರೇಶ್, ಅಮ್ಜದ್ ಅಲಿ, ಎಂ.ಎ. ಸಾಧಿಕ್, ಕೆ.ಹೆಚ್. ಮಹಬೂಬ್, ಮಂಜುನಾಯ್ಕ್ ಕಾರ್ಯದರ್ಶಿ, ಮಂಜು ಆವರಗೆರೆ, ರಾಜು ಎಸ್.ಎಂ. ಶ್ರೀಮತಿ ಮಾಲ ನಾಗರಾಜ್, ರಾಮಚಂದ್ರ ಎಂ.ಬಿ, ಆನಂದ್ ಎಂ., ದೇವೇಂದ್ರಪ್ಪ , ಎಸ್.ಎಂ. ಸಾಧಿಕ್, ಬಾಬುರಾವ್, ಬಿಲಾಲ್, ಆಜಮ್ ರಜ್ವಿ, ಮಾಲಾ ನಾಗರಾಜ್, ಶಾಂತಮ್ಮ ರಾಧರೆಡ್ಡಿ, ಕವಿತಾ ಬಾಯಿ, ಭೋಜರಾಜು, ಬಿ.ವಿ. ಮಂಜುನಾಥ, ಅಜ್ಜಣ್ಣ, ನವಾಜ್, ಶಹಭಾಜ್, ಗಣೇಶ್ ಯಡಿಹಳ್ಳಿ, ರಾಜಶೇಖರ್, ನಿಂಗಪ್ಪ ಇತರರಿದ್ದರು.

ಭಾರತ ಕಮ್ಯುನಿಸ್ಟ್ ಪಕ್ಷ, ಎಐಟಿಯುಸಿ, ಎಐಯುಟಿಯುಸಿ, ಸಿಐಟಿಯು, ಆಮ್ ಆದ್ಮಿ ಪಾರ್ಟಿ, ಬೀಡಿ ಕಾರ್ಮಿಕರು, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಕನ್ನಡಪರ ಸಂಘಟನೆಗಳು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದವು.

ಎಪಿಎಂಸಿಯಲ್ಲಿ ಕೆಲ ಅಂಗಡಿಗಳು ತೆರೆಯಲ್ಪಟ್ಟಿದ್ದವು. ಕೃಷಿ ಇಲಾಖೆ ಸೇರಿದಂತೆ ಸರ್ಕಾರಿ ಕಚೇರಿಗಳು ಎಂದಿನಂತೆ ಕಾರ್ಯ ನಿರ್ವಹಿದವು.

## ಕೇಂದ್ರ ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ದಂಡ ತೆರಬೇಕಾಗುತ್ತದೆ



ರೈತ ಮುಖಂಡ, ಜಿಲ್ಲಾ ಪಂಚಾಯ್ತಿ ಸದಸ್ಯ ತೇಜಸ್ವಿ ಪಟೇಲ್ ಹದಡಿ ರಸ್ತೆಯಲ್ಲಿ ಆಹಾರದ ಪೊಟ್ಟಣಗಳನ್ನು ವಿತರಿಸಿ, ಬಂದ್‌ಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ನಂತರ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಮುಂಭಾಗ ಪ್ರತಿಭಟನೆಯಲ್ಲಿ ಪಾಲ್ಗೊಂಡು ಕೇಂದ್ರ ವಿರೋಧಿ ಧೋರಣೆ ಖಂಡಿಸಿದರು.

ಅಗತ್ಯ ವಸ್ತುಗಳ ಕಾಯ್ದೆ ರದ್ದಾದರೆ ನಾಳೆ ಏಕಸ್ವಾಮ್ಯವಾಗುತ್ತದೆ. ಬಂಡವಾಳ ಶಾಹಿಗಳು ಕೃಷಿ ಉತ್ಪನ್ನ ವಸ್ತುಗಳನ್ನು ಖರೀದಿಸಿ ಮನಸೋ ಇಚ್ಛೆ ದರ ನಿಗದಿಪಡಿಸಲು ಸಾಧ್ಯವಿದೆ ಎಂದು ಹೇಳಿದರು.

ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಮುಂಭಾಗ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರೈತ ಹೋರಾಟಗಳ ಹಿಂದೆ ದಲ್ಲಾಳಿಗಳು ಹಾಗೂ ವರ್ತಕರ ಕೈವಾಡ ಇದೆ ಎಂದು ಬಿಜೆಪಿ ಮುಖಂಡರು ಆರೋಪಿಸುತ್ತಿದ್ದಾರೆ. ಆದರೆ ಯಾವ ಕಾಯ್ದೆಗಳು ವರ್ತಕರ ಪರವಾಗಿದೆ ಎಂದು ಎಲ್ಲರಿಗೂ ತಿಳಿದ ವಿಷಯವೇ ಎಂದರು. ಉದ್ಯಮಿಗಳಿಗೆ ಬಂಡವಾಳ ಶಾಹಿಗಳಿಗೆ ಅನುಕೂಲ ಮಾಡಿಕೊಡುವಂತೆ ಕಾಯ್ದೆಗಳನ್ನು ನೀವು ಜಾರಿಗೆ ತರುತ್ತಿದ್ದೀರಿ. ಹೀಗಿದ್ದಾಗ ವರ್ತಕರ ಪರ ನೀವೋ ಅಥವಾ ರೈತರೋ ಎಂದು ಪ್ರಶ್ನಿಸಿದರು.

ನಾವು ಪ್ರಾಮಾಣಿಕ ಪ್ರಧಾನ ಮಂತ್ರಿಗಳನ್ನು ಕಾಣುತ್ತಿದ್ದೇವೆ. ಹಿಂದೆ ಮನಮೋಹನ್ ಸಿಂಗ್ ಪ್ರಾಮಾಣಿಕ ಪ್ರಧಾನಿಯಾಗಿದ್ದರು. ಆಗ ಸರ್ಕಾರ ಹಗರಗಳಲ್ಲಿ ಸಿಲುಕಿತ್ತು. ಈಗ ನರೇಂದ್ರ ಮೋದಿ ಪ್ರಾಮಾಣಿಕರಾಗಿದ್ದಾರೆ. ಆದರೆ ಒಂದೊಂದೇ ಸಂಸ್ಥೆಗಳನ್ನು ಖಾಸಗಿ ಕೊಡುತ್ತಿದ್ದಾರೆ ಎಂದು ತೇಜಸ್ವಿ ಮಾರ್ಮಿಕವಾಗಿ ಹೇಳಿದರು.

ಸುಗ್ರೀವಾಜ್ಞೆ ತರದಿದ್ದರೆ ಬಿಜೆಪಿಯವರೇ ಕಾಯ್ದೆ ವಿರುದ್ಧ ದನಿ ಎತ್ತುತ್ತಿದ್ದರು. ಬ್ರೈನ್ ಮ್ಯಾಪಿಂಗ್ ಮಾಡಿದರೆ ಬಿಜೆಪಿಯವರೇ ಕಾಯ್ದೆ ವಿರೋಧಿಸುತ್ತಾರೆ. ಆದರೆ ಮೋದಿ ವಿರುದ್ಧ ಮಾತನಾಡಿದರೆ ಪಕ್ಷದಲ್ಲಿ ಸ್ಥಾನ ಇಲ್ಲ ಎಂಬಂತಹ ಸ್ಥಿತಿ ನಿರ್ಮಾಣವಾಗಿರುವುದರಿಂದ ಸುಮ್ಮನಿದ್ದಾರೆ ಎಂದರು.

ಬಿಜೆಪಿ ಪಕ್ಷಕ್ಕೆ ಉಳಿಗಾಲ ಬೇಕಾದರೆ ಕಾಯ್ದೆ ವಿರೋಧಿಸಿ ಹೋರಾಟ ಮಾಡಬೇಕು ಎಂದ ತೇಜಸ್ವಿ, ಕೇಂದ್ರ ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ ಸೂಕ್ತ ತಂಡ ತೆರಬೇಕಾಗುತ್ತದೆ ಎಂದು ಎಚ್ಚರಿಸಿದರು.

## ಖಾಲಿ ತಟ್ಟೆ, ಖಾಲಿ ಲೋಟ ಪ್ರದರ್ಶಿಸಿ ಕಾಂಗ್ರೆಸ್ ಪ್ರತಿಭಟನೆ

ಜಯದೇವ ವೃತ್ತದಲ್ಲಿ ಕಾಂಗ್ರೆಸ್ ಮುಖಂಡರು ಕೇಂದ್ರದ ಕಾಯ್ದೆಗಳಿಂದ ಮುಂದಿನ ದಿನಗಳಲ್ಲಿ ಜನರು ಖಾಲಿ ತಟ್ಟೆ, ಖಾಲಿ ಲೋಟ ಹಿಡಿಯುವ ಪರಿಸ್ಥಿತಿ ಬರುತ್ತದೆ ಎಂದು ಸಾಂಕೇತಿಕವಾಗಿ ಖಾಲಿ ತಟ್ಟೆ, ಖಾಲಿ ಲೋಟ ಹಿಡಿದು ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಪ್ರತಿಭಟನೆ ವೇಳೆ ಮಾತನಾಡಿದ ಕೆಪಿಸಿಸಿ ಸದಸ್ಯ ಡಿ.ಬಸವರಾಜ್, ಪ್ರಧಾನಿ ಮೋದಿ ರೈತರ ಮರಣ ಶಾಸನ ಬರೆಯಲು ಹೊರಟಿದ್ದಾರೆ ಎಂದು ಆರೋಪಿಸಿದರು. ಕಾಂಗ್ರೆಸ್ ಎಂದಿಗೂ ರೈತರ ಪರ ಇರುತ್ತದೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್, ಯಡಿಯೂರಪ್ಪನವರು ಗೊಬ್ಬರ ಕೇಳಿದವರ ಮೇಲೆ ಗುಂಡು ಹಾಕಿದರೆ, ಮೋದಿಯವರು ಈಗ ರೈತರ ಮೇಲೆ ಜಲಫಿರಂಗಿ ಸಿಡಿಸುತ್ತಿದ್ದಾರೆ. ಜನ ಸಾಮಾನ್ಯರ, ರೈತರ ಹಿತ ಕಾಯದ ಪ್ರಧಾನಿ ಕೂಡಲೇ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಮುಖಂಡ ಕೆ.ಜಿ. ಶಿವಕುಮಾರ್, ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಸದಸ್ಯ ಚಮನ್ ಸಾಬ್, ಮುಖಂಡರಾದ ಕೋಳಿ ಇಬ್ರಾಹಿಂ, ಟಿ. ಶಿವಕುಮಾರ್, ಡೋಲಿ ಚಂದ್ರು, ಗಣೇಶ್ ಹುಲ್ಲಮನಿ, ಇನ್‌ಟೆಕ್ ಘಟಕದ ಜಿಲ್ಲಾಧ್ಯಕ್ಷೆ ದಾಕ್ಷಾಯಣಮ್ಮ, ಗೀತಾ ರಾಜಕುಮಾರ್, ಕಸ್ತೂರಿ, ಲಲಿತಾ, ಸಂಗೀತಾ, ರಾಜೇಶ್ವರಿ ಮತ್ತಿತರರು ಭಾಗವಹಿಸಿದ್ದರು.

## ಬಸ್ ತಡೆದ ಪ್ರತಿಭಟನಾಕಾರರು

ಪಿ.ಬಿ. ರಸ್ತೆಯಲ್ಲಿರುವ ಎಪಿಎಂಸಿ ಮೇಲ್ಸೇತುವೆ ಬಳಿ ಕೆಎಸ್ಸಾರ್ಟಿಸಿ ಬಸ್ ನಲ್ಲಿ ಚಿತ್ರದುರ್ಗಕ್ಕೆ ತೆರಳುವ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಿರುವುದನ್ನು ನೋಡಿದ ಪ್ರತಿಭಟನಾಕಾರರು, ಪ್ರಯಾಣಿಕರನ್ನು ಇಳಿಸಿ ಬಸ್ ವಾಪಾಸ್ ಕಳುಹಿಸಿದ ಘಟನೆ ಮುಂಜಾನೆ ನಡೆಯಿತು.

# ರಾಜೇಂದ್ರ ಪ್ರಸಾದ್ ಅತ್ಯಧಿಕ ಮತಗಳಿಂದ ಆಯ್ಕೆ

(1ನೇ ಪುಟದಿಂದ) ಇಬ್ಬರು, ನಾಲ್ವರು ಚುನಾಯಿತ ಸದಸ್ಯರು ಸೇರಿದಂತೆ, ಒಟ್ಟು 12 ನಿರ್ದೇಶಕರುಗಳಿದ್ದು, ಇವರಲ್ಲಿ ರಾಜೇಂದ್ರ ಪ್ರಸಾದ್ ಒಬ್ಬರಾಗಿದ್ದಾರೆ.

ಚುನಾಯಿಸಲ್ಪಡುವ ನಾಲ್ವರು ನಿರ್ದೇಶಕರುಗಳ ಆಯ್ಕೆಗೆ ರಾಜ್ಯದಲ್ಲಿ ನಾಲ್ಕು ವಲಯಗಳನ್ನಾಗಿ ವಿಂಗಡಿಸಲಾಗಿದ್ದು, ಈ ಪೈಕಿ ವಲಯ ಎರಡರಿಂದ ಸ್ಪರ್ಧೆ ಮಾಡಿದ್ದ ರಾಜೇಂದ್ರ ಪ್ರಸಾದ್ ಅವರು ತಮ್ಮ ಪ್ರತಿಸ್ಪರ್ಧಿ ರವಿಕುಮಾರ್ ಪಾಟೀಲ್ ಅವರನ್ನು 2,864 ಮತಗಳ ಅಂತರದಿಂದ ಪರಾಭವಗೊಳಿಸಿ ಜಯ ಗಳಿಸಿದ್ದಾರೆ.

ದಾವಣಗೆರೆ, ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನೊಳಗೊಂಡಿರುವ ವಲಯ ಎರಡರಿಂದ ಆಯ್ಕೆ ಬಯಸಿ ರವಿಕುಮಾರ್ ಪಾಟೀಲ್ ಮತ್ತು ರಾಜೇಂದ್ರ ಪ್ರಸಾದ್ ಸ್ಪರ್ಧಿಸಿದ್ದರು. ಒಟ್ಟು 6,538 ಮತಗಳಲ್ಲಿ ಚಲಾಯಿಸಲ್ಪಟ್ಟು 3,758 ಮತಗಳಲ್ಲಿ ರಾಜೇಂದ್ರ ಪ್ರಸಾದ್ 3,311 ಮತಗಳನ್ನು ಗಳಿಸಿದರೆ, ರವಿಕುಮಾರ್ ಕೇವಲ 447 ಮತಗಳಿಗೆ ತೃಪ್ತಿಪಟ್ಟುಕೊಂಡರು.

2011ರ ಚುನಾವಣೆಯಲ್ಲಿ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ಒತ್ತಾಸೆಯಿಂದಾಗಿ ಮಹಾಬಲೇಶ್ವರ ಗೌಡರ ವಿರುದ್ಧ ಸ್ಪರ್ಧಿಸಿ ಕೇವಲ 13 ಮತಗಳಿಂದ ಆಯ್ಕೆಯಾಗಿದ್ದ ರಾಜೇಂದ್ರ ಪ್ರಸಾದ್, 2014ರ ಚುನಾವಣೆಯಲ್ಲೂ ಮತ್ತೆ ಮಹಾಬಲೇಶ್ವರ ಗೌಡರ ವಿರುದ್ಧ 455 ಮತಗಳನ್ನು ಹೆಚ್ಚು ಪಡೆದು ಚುನಾಯಿತಗೊಂಡಿದ್ದರು. 2017ರ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದ ಅವರು, ಈ ಬಾರಿ ಮಹಾಬಲೇಶ್ವರ ಗೌಡರ ಅಳಿಯ ರವಿಕುಮಾರ್ ಪಾಟೀಲ್ ವಿರುದ್ಧ ಭಾರೀ ಮತಗಳ ಅಂತರದಿಂದ ವಿಜಯಿಯಾಗಿದ್ದಾರೆ.

ಮೊನ್ನೆ ನಡೆದಿದ್ದ ಚುನಾವಣೆಯ ಮತಗಳ ಎಣಿಕೆ ಕಾರ್ಯವು ಇಂದು ನಡೆದು, ಸಂಜೆ ವೇಳೆಗೆ ಫಲಿತಾಂಶ ಪ್ರಕಟಗೊಂಡಿತು. ಒಂದೂ ಮತಗಳು ತಿರಸ್ಕೃತಗೊಂಡಿಲ್ಲ.

ಫಲಿತಾಂಶದ ನಂತರ 'ಜನತಾವಾಣಿ' ಯೊಂದಿಗೆ ಮಾತನಾಡಿದ ರಾಜೇಂದ್ರ ಪ್ರಸಾದ್, ಐದು ದಶಕಗಳ ಇತಿಹಾಸ ಹೊಂದಿರುವ ಕರ್ನಾಟಕ ರಾಜ್ಯ ಬೀಜ ನಿಗಮದಲ್ಲಿ ಇನ್ನೂ ಉತ್ತಮ ಸೇವೆ ಸಲ್ಲಿಸುವುದರ ಮೂಲಕ ರೈತ ಬಂಧುಗಳ ಋಣ ತೀರಿಸುವುದಾಗಿ ತಿಳಿಸಿದ್ದಾರೆ.

ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ, ಮಾಜಿ ಶಾಸಕರುಗಳಾದ ಹೆಚ್.ಪಿ. ರಾಜೇಶ್, ಹೆಚ್.ಎಸ್. ಶಿವಶಂಕರ್, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಬೇವಿನಹಳ್ಳಿ ಬಸವನಗೌಡ್ರು, ನಿವೃತ್ತ ಅಧಿಕಾರಿಗಳಾದ ಕರೇಗೌಡರ್, ರವಿಕುಮಾರ್, ನಿವೃತ್ತ ಶಿಕ್ಷಕ ಆಂಜನೇಯ ಅವರುಗಳಲ್ಲದೇ, ಪಕ್ಷಾತೀತವಾಗಿ ಅನೇಕ ಮುಖಂಡರು, ಕಾರ್ಯಕರ್ತರು ತಮ್ಮ ಗೆಲುವಿಗೆ ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ್ದಾರೆ ಎಂದು ಸ್ಮರಿಸಿರುವ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

# ಹೆಚ್ಚಳಕ್ಕೆ ಕಾಯ್ದೆಗಳ ನೆರವು

(1ನೇ ಪುಟದಿಂದ) ಪಾಲ್ಗೊಳ್ಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವರ ಚಿತಾವಣೆಯಿಂದ ಭಾರತ್ ಬಂದ್‌ಗೆ ಕರೆ ನೀಡಿದ್ದರೂ, ಇದಕ್ಕೆ ಜನ ಸ್ಪಂದನೆ ದೊರೆತಿಲ್ಲ ಎಂದಿದ್ದಾರೆ.

ರೈತರ ಬದುಕನ್ನು ಹಸನುಗೊಳಿಸಲು ತಂದಿರುವ ಕಾನೂನಿಗೆ ಜನತೆಯ ಬೆಂಬಲ ಇದೆ ಎಂಬುದು ಇದರಿಂದಲೇ ಅರಿವಾಗುತ್ತದೆ ಎಂದರು. ಕೃಷಿ ಕ್ಷೇತ್ರದಲ್ಲಿ ಸುಧಾರಣೆ ತರಲು ಪ್ರಧಾನಿ ನರೇಂದ್ರ ಮೋದಿ ಅವರು ಈ ಮಸೂದೆಗಳನ್ನು ಜಾರಿಗೆ ತಂದಿದ್ದಾರೆ. ಕೃಷಿ ಉತ್ಪನ್ನಗಳನ್ನು ಸರ್ಕಾರ ಖರೀದಿಸುವ ಪ್ರಕ್ರಿಯೆ, ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ಖಚಿತವಾಗಿ ಮುಂದುವರೆಯಲಿದೆ. ಜತೆಗೆ ರೈತರಿಗೆ ಹೆಚ್ಚಿನ ಅವಕಾಶ, ಆಯ್ಕೆ ಮತ್ತು ಆದಾಯ ಹೆಚ್ಚಿಸಲು ಕಾಯ್ದೆ ನೆರವಾಗಲಿದೆ ಎಂದರು.

ರಾಜಕೀಯ ಅಸ್ತಿತ್ವಕ್ಕಾಗಿ ಕೇಂದ್ರ ಸರ್ಕಾರದ ಕೃಷಿ ಸುಧಾರಣೆಗಳನ್ನು ವಿರೋಧಿಸುತ್ತಿರುವ ಪ್ರತಿಪಕ್ಷಗಳು ಹಿಂದೆ ಸುಧಾರಣಾ ಕಾಯ್ದೆಗಳ ಪರವಾಗಿದ್ದವು.

ಈಗ ಮಸೂದೆ ವಿರುದ್ಧ ರೈತರನ್ನು ದಾರಿ ತಪ್ಪಿಸುವ ಕೆಲಸ ಮಾಡಲಾಗುತ್ತಿದೆ. ಅನ್ನದಾತನಿಗೆ ಆಗುವ ಅನುಕೂಲತೆಗಳನ್ನು ತಪ್ಪಿಸಲು ನಡೆಸುತ್ತಿರುವ ವಿರೋಧವನ್ನು ಒಪ್ಪಲಾಗದು. ಇದರ ವಿರುದ್ಧ ನಮ್ಮ ಪಕ್ಷ ಜಾಗೃತಿ ಮೂಡಿಸಲಿದೆ ಎಂದರು.

# ಸಿಗದ ನಿರೀಕ್ಷಿತ ಯಶಸ್ಸು

(1ನೇ ಪುಟದಿಂದ) ಮಂಡಲದ ಅಧಿವೇಶನ ನಡೆಯುತ್ತಿರುವುದರಿಂದ ಇನ್ನುಳಿದವರು ಕೇವಲ ಪ್ರತಿಮೆ ಮುಂದೆ ಕುಳಿತು ಅಧಿವೇಶನಕ್ಕೆ ಹಿಂದಿರುಗಿದರು.

ರಾಜ್ಯಾದ್ಯಂತ ರೈತ ಸಂಘಟನೆಗಳು, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ವ್ಯಕ್ತಪಡಿಸಿ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಡುವ ಎಪಿಎಂಸಿ ಹಾಗೂ ಭೂ ಸುಧಾರಣೆ ಕಾಯ್ದೆ ತಿದ್ದುಪಡಿ ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದವು.

# ಹುಕ್ಕಾಬಾರ್ ಮುಚ್ಚಿಸುತ್ತೇವೆ

(1ನೇ ಪುಟದಿಂದ) ಕಾರಣವಾಗುತ್ತಿವೆ ಎಂದರು.

ಇಂಥ ಕೇಂದ್ರಗಳನ್ನು ತಕ್ಷಣವೇ ಮುಚ್ಚಿಸಲು ಆದೇಶಿಸುತ್ತೇನೆ. ಹುಕ್ಕಾ ಬಾರ್‌ಗಳ ಲ್ಲದೆ, ರಾಜ್ಯದ ಕೆಲವು ಕಡೆ ರಿಕ್ರಿಯೇಷನ್ ಕ್ಲಬ್ ಆರಂಭಗೊಂಡು ಮಾದಕ ದ್ರವ್ಯದ ಮಾರಾಟ ಕೇಂದ್ರಗಳಾಗಿ ಪರಿವರ್ತನೆಗೊಳ್ಳುತ್ತಿವೆ.

ಮಾದಕ ದ್ರವ್ಯದ ದಂಧೆ ಸರ್ಕಾರ ಹತ್ತಿಕ್ಕಲು ಹತ್ತು ಹಲವು ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಎಂದು ತಿಳಿಸಿದರು.


**ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ**
ಸಹಾಯಕ ಬೀಜೋತ್ಪಾದನಾ ತಜ್ಞರು, ಬೀಜಘಟಕ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆ ಚನ್ನಗಿರಿ (ತಾ), ದಾವಣಗೆರೆ (ಜಿ)
ಸಂಖ್ಯೆ: ಬೀಜಘಟಕ/ಕೃ.ತೋ.ಸಂ. ಕೇಂದ್ರ/2020-21 ದಿನಾಂಕ: 08.12.2020

**ಟೆಂಡರ್ ಪ್ರಕಟಣೆ**


ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ ಬೀಜಘಟಕ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆಯ ಉಗ್ರಾಣದಲ್ಲಿ ಇರುವ ವಿವಿಧ ಬೆಳೆ/ತಳಿಯ ಧಾನ್ಯಗಳ ದಾಸ್ತಾನಿನ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಬೆಳೆ / ತಳಿ | ಪ್ರಮಾಣ (ಕ್ವಿ) |
|---|---|---|
| 01 | ರಾಗಿ/ಎಂ.ಎಲ್-365 | 43.45 |
| 02 | ರಾಗಿ / ಜಿ.ಪಿ.ಯು-28 | 86.70 |
| 03 | ಉದ್ದು /ರಶ್ಮಿ | 13.80 |
| 04 | ಹೆಸರು / ಕೆ.ಕೆ.ಎಂ-3 | 0.75 |
| 05 | ಭತ್ತ / ಎಂ.ಟಿ.ಯು-1010 | 26.50 |
| 06 | ಭತ್ತ /ಜ್ಯೋತಿ | 279.00 |
| 07 | ಭತ್ತ / ಎಂ.ಟಿ.ಯು-1001 | 734.75 |

ಈ ಮೇಲ್ಕಂಡ ಧಾನ್ಯಗಳ ದಾಸ್ತಾನನ್ನು ವಿಶ್ವವಿದ್ಯಾಲಯದ ಷರತ್ತುಗಳ ಅನ್ವಯದ ಮೇರೆಗೆ ದಿನಾಂಕ: 17.12.2020ರಂದು ಬೀಜಘಟಕ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆಯಲ್ಲಿ ಬೆಳಿಗ್ಗೆ 11.00 ಕ್ಕೆ ಬಹಿರಂಗ ಹರಾಜು ಮುಖಾಂತರ ವಿಲೇವಾರಿ ಮಾಡಲಾಗುವುದು, ಆಸಕ್ತಿವುಳ್ಳ ಬಿಡ್ಡುದಾರರು / ಖರೀದಿದಾರರು ಭಾಗವಹಿಸಬೇಕೆಂದು ತಿಳಿಯಪಡಿಸಲಾಗಿದೆ.


ಸಹಿ
ಸಹಾಯಕ ಬೀಜೋತ್ಪಾದನಾ ತಜ್ಞರು
ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆ-577219, ಚನ್ನಗಿರಿ ತಾಲ್ಲೂಕು.
ಮೊ.ನಂ: 94836 95477, 94808 38215

**ತೃತೀಯ ವರ್ಷದ ಪುಣ್ಯಸ್ಮರಣೆ**



**ಹೆಚ್. ಸದಾಶಿವಪ್ಪ**
ಜಂಟಿ ನಿರ್ದೇಶಕರು (ನಿವೃತ್ತ)
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳು ಕಳೆದಿವೆ. ಸದಾ ನಿಮ್ಮ ನೆನಪಿನಲ್ಲಿ ಇರುವ
ಪತ್ನಿ: ಹೆಚ್. ದೇವೀರಮ್ಮ, ಮಕ್ಕಳು ಹಾಗೂ ಮೊಮ್ಮಕ್ಕಳು, ಬೆಳ್ಳೂಡಿ, ಹರಿಹರ ತಾ||

**11ನೇ ವರ್ಷದ ಪುಣ್ಯಸ್ಮರಣೆ**



**ಕೆ.ಎಂ. ಕೊಟ್ರಯ್ಯನವರು**
ನಿವೃತ್ತ ಶಿಕ್ಷಕರು
ನೀವು ನಮ್ಮನ್ನೆಲ್ಲ ಅಗಲಿ ಇಂದಿಗೆ 11 ವರ್ಷಗಳಾದವು ದೈಹಿಕವಾಗಿ ನೀವು ನಮ್ಮ ಬಳಿ ಇಲ್ಲದಿದ್ದರೂ ನಮ್ಮೆಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿರುತ್ತೀರಿ, ನೀವು ಬದುಕಿದ ರೀತಿಯೇ ನಮಗೆ ಮಾರ್ಗದರ್ಶನ.
ಇಂತಿ ನಿಮ್ಮ ಕುಟುಂಬ ವರ್ಗ
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಕುರುಡಿ ಮಠದ ವಂಶಸ್ಥರು, ಕಬ್ಬೂರು ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು, ದಾವಣಗೆರೆ.

# ಜಗಳೂರು: ಬಂದ್ ಭಾಗಶಃ ಯಶಸ್ವಿ



ಜಗಳೂರು, ಡಿ.8- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳನ್ನು ಖಂಡಿಸಿ ರೈತ ಸಂಘಟನೆಗಳು ಇಂದು ನಡೆಸಿದ ಭಾರತ್ ಬಂದ್‌ಗೆ ಪ್ರಗತಿ ಪರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದವು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ರೈತರು ಮತ್ತು ವಿವಿಧ ಸಂಘಟನೆಗಳ ಪ್ರತಿಭಟನಾಕಾರರು ಮಹಾತ್ಮಗಾಂಧಿ ವೃತ್ತದ ಬಳಿ ಮಾನವ ಸರಪಳಿ ನಿರ್ಮಿಸಿ, ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ನಂತರ ಹೊಸ ಬಸ್ ನಿಲ್ದಾಣ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತದ ಬಳಿ ರೈತಗೀತೆ, ಕ್ರಾಂತಿಗೀತೆ ಹಾಡುವ ಮೂಲಕ ಆಕ್ರೋಶ ವ್ಯಕ್ತ ಪಡಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘಟನೆಯ ಅಧ್ಯಕ್ಷ ಚಿರಂಜೀವಿ, ನಿಂಗಪ್ಪ, ಎಐಟಿಯುಸಿ ಕಾರ್ಯದರ್ಶಿ ಮಹಮ್ಮದ್ ಬಾಷಾ, ಭದ್ರಾ ಮೇಲ್ದಂಡೆ ಹೋರಾಟ ಸಮಿತಿಯ ವಕೀಲ ಆರ್. ಓಬಳೇಶ್, ಪ್ರಗತಿಪರ ಸಂಘಟನೆಗಳ ಮುಖಂಡರಾದ ಮಾದಿಹಳ್ಳಿ ಮಂಜುನಾಥ್, ಅನಂತರಾಜ್, ಹೇಮರೆಡ್ಡಿ ಸತೀಶ್, ರಾಜು, ದೊಣ್ಣೆಹಳ್ಳಿ ಚೌಡಮ್ಮ, ಗ್ರಾಕೋಸ್ ಸಂಘಟನೆಯ ಸುಧಾ, ಭಾರತಿ, ಗೀತಾ, ಶಿಲ್ಪ, ವಸಂತ, ಭೀಮ್ ಆರ್ಮಿ ಸಂಘಟನೆಯ ಹನುಮಂತಪ್ಪ, ಲೋಕೇಶ್ ಶರಣಪ್ಪ, ಕೆಂಚಪ್ಪ ಇನ್ನಿತರರಿದ್ದರು.

**ಬಂದ್‌ಗೆ ಮಿಶ್ರ ಪ್ರತಿಕ್ರಿಯೆ:** ಭಾರತ್ ಬಂದ್ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತರಾಗಿ ಬಟ್ಟೆ ಅಂಗಡಿ, ಕಿರಾಣಿ ಅಂಗಡಿ ಬಂದ್ ಮಾಡಲಾಗಿತ್ತು. ಸರ್ಕಾರಿ ಕಛೇರಿಗಳು, ಬ್ಯಾಂಕ್, ಮೆಡಿಕಲ್ ಸ್ಟೋರ್, ಹಣ್ಣು, ತರಕಾರಿ, ಅಗತ್ಯ ವಸ್ತುಗಳ ವ್ಯಾಪಾರ, ಬಸ್ ಸಂಚಾರ ಎಂದಿನಂತೆ ಕಾರ್ಯ ನಿರ್ವಹಿಸಿದವು.

# ಬೇಡಿಕೆ ಈಡೇರದಿದ್ದರೆ ವಿಧಾನಸೌಧ ಮುತ್ತಿಗೆ, ಉಪವಾಸ

## ಲಿಂಗಾಯತ ಮೀಸಲಾತಿಗೆ ಬಿಜೆಪಿ ಹೈಕಮಾಂಡ್ ಅಡ್ಡಗಾಲು

**ಲಿಂಗಾಯತರಿಗೆ ಮೀಸಲಾತಿ ಕಲ್ಪಿಸಿದರೆ ಅವರು ಹೀರೋ ಆಗುತ್ತಾರೆ ಎಂದು ಬಿಜೆಪಿ ವರಿಷ್ಠರು ಮೀಸಲಾತಿಗೆ ಅಡ್ಡ ಹಾಕಿದ್ದಾರೆ ಎಂದು ಲಿಂಗಾಯತ ಪಂಚಮಸಾಲಿ ಸಮಾಜದ ಮುಖಂಡ ಹಾಗೂ ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ್ ಆರೋಪಿಸಿದ್ದಾರೆ. ಸಂಪುಟದಲ್ಲಿ ಲಿಂಗಾಯತರಿಗೆ ಮೀಸಲಾತಿ ಕಲ್ಪಿಸುವ ಪ್ರಸ್ತಾಪ ಬಂದರೂ ಜಾರಿಯಾಗದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಒ.ಬಿ.ಸಿ. ಮಾಡಿದರೆ ಯಡಿಯೂರಪ್ಪ ಲಿಂಗಾಯತರ ನಾಯಕರಾಗುತ್ತಾರೆ ಎಂದೇ ಹೈಕಮಾಂಡ್ ತಡೆದಿದೆ ಎಂದಿದ್ದಾರೆ.**

## ಸಮಾಜ ಒಡೆಯುವವರಿಗೆ ಪಾಠ

ಪಂಚಮಸಾಲಿ ಸಮಾಜದ ಎರಡು ಪೀಠಗಳಿವೆ ಎಂದು ಕೆಲವರು ಸಮಾಜವನ್ನು ಒಡೆಯುವ ಯತ್ನ ನಡೆಸಿದ್ದಾರೆ. ಆದರೆ, ಹತ್ತು ಪೀಠಗಳಾದರೂ ಪಂಚಮಸಾಲಿಗಳು ಒಂದೇ. ಸಮಾಜ ಒಡೆಯಲು ಯತ್ನಿಸುತ್ತಿರುವವರಿಗೆ ಪಾಠ ಕಲಿಸುತ್ತೇವೆ ಎಂದು ಲಿಂಗಾಯತ ಪಂಚಮಸಾಲಿ ಸಮಾಜದ ಮುಖಂಡ ಹಾಗೂ ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ್ ಹೇಳಿದ್ದಾರೆ.

ದಾವಣಗೆರೆ ಜಿಲ್ಲೆಯಲ್ಲಿ ಪಂಚಮಸಾಲಿಗಳ ಸಂಖ್ಯೆ ಹೆಚ್ಚಾಗಿದೆ. ಆದರೂ, ಇಲ್ಲಿ ಪಂಚಮಸಾಲಿ ಶಾಸಕರಾಗಲೀ, ಸಂಸದರಾಗಲೀ ಇಲ್ಲ. ಬ್ರಿಟಿಷರಂತೆ ಒಡೆದು ಆಳುವ ನೀತಿಯೇ ಇದಕ್ಕೆ ಕಾರಣ ಎಂದೂ ಅವರು ಆರೋಪಿಸಿದರು.



**(1ನೇ ಪುಟದಿಂದ)** ಇನ್ನೂ 72 ಒಳಪಂಗಡಗಳಿಗೆ ಮೀಸಲಾತಿ ಕಲ್ಪಿಸಬೇಕಿದೆ. ಈ ಎಲ್ಲ ಒಳಪಂಗಡಗಳಿಗೆ ರಾಜ್ಯದಲ್ಲಿ 2ಎ ಹಾಗೂ ಕೇಂದ್ರದಲ್ಲಿ ಒಬಿಸಿ ಮೀಸಲಾತಿ ಕಲ್ಪಿಸಬೇಕೆಂದು ಶ್ರೀಗಳು ಒತ್ತಾಯಿಸಿದ್ದಾರೆ. ಬರುವ ಡಿ.23ರಿಂದ ಪಾದಯಾತ್ರೆ ಆರಂಭಿಸಲು ಉದ್ದೇಶಿಸಲಾಗಿದೆ. ಈ ಬಗ್ಗೆ ದಾವಣಗೆರೆಯಲ್ಲಿಂದು ಪೂರ್ವಭಾವಿ ಸಭೆ ನಡೆಸಲಾಗಿದೆ. ಬೆಂಗಳೂರಿನಲ್ಲಿ ನಾಳೆ ನಡೆಯಲಿರುವ ಸಭೆಯಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಈ ಪಾದಯಾತ್ರೆಯಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಜನರು ಭಾಗಿಯಾಗಲಿದ್ದಾರೆ. ಪಾದಯಾತ್ರೆ ಮೂಲಕ ಬೆಂಗಳೂರಿಗೆ ತೆರಳಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು. ಆಗಲೂ ಬೇಡಿಕೆ ಈಡೇರಿಸದೇ ಇದ್ದರೆ ಆಮರಣಾಂತ ಉಪವಾಸ ಕೈಗೊಳ್ಳಲಾಗುವುದು ಎಂದು ಸ್ವಾಮೀಜಿ ತಿಳಿಸಿದ್ದಾರೆ.

ಸಂವಿಧಾನದ ಅನ್ವಯ ಮುಖ್ಯಮಂತ್ರಿ ತಾವೇ 2ಎ ನೀಡುವ ಕುರಿತು ನಿರ್ಧರಿಸಬಹುದು. ಮುಖ್ಯಮಂತ್ರಿ ಮನಸ್ಸು ಮಾಡಿದರೆ ಇಂದು ಸಂಜೆಯೇ ಮೀಸಲಾತಿ ಕಲ್ಪಿಸಬಹುದು. ಯಡಿಯೂರಪ್ಪ ಮಾತಿಗೆ ತಪ್ಪುವುದಿಲ್ಲ ಎಂಬ ಹೆಸರು ಪಡೆದಿದ್ದಾರೆ. ಈ ಬಾರಿಯೂ ಅದರಂತೆ ನಡೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ನಾವು ಸಮಾಜದ ಮುಖಂಡರಿಗಾಗಿ ಯಾವುದೇ ಸಚಿವ ಸ್ಥಾನ - ನಿಗಮಗಳನ್ನು ಕೇಳುತ್ತಿಲ್ಲ. ನಮ್ಮ ಸಮಾಜದ ಬಡ ಮಕ್ಕಳಿಗಾಗಿ ಮೀಸಲಾತಿ ಕೇಳುತ್ತಿದ್ದೇವೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಮೀಸಲಾತಿ ಬೇಕಿದೆ. ಯಡಿಯೂರಪ್ಪನವರಿಗೆ ದೊರೆತ ಬೆಂಬಲದಲ್ಲಿ ಶೇ.70ರಷ್ಟು ಪಂಚಮಸಾಲಿ ಸಮಾಜದ್ದು ಎಂದೂ ಶ್ರೀಗಳು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಲಿಂಗಾಯತ ಪಂಚಮಸಾಲಿ ಸಮಾಜದ ಮುಖಂಡ ಹಾಗೂ ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ್, ಪಾದಯಾತ್ರೆಯಲ್ಲಿ ಕನಿಷ್ಠ 50 ಸಾವಿರ ಜನರು ಸಾಗಿ ಬರಲಿದ್ದಾರೆ. ಬೆಂಗಳೂರಿಗೆ ಹತ್ತು ಲಕ್ಷ ಜನ ತಲುಪುತ್ತೇವೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್, ಪಾಲಿಕೆ ಸದಸ್ಯ ಸ್ವಾಗಿ ಶಾಂತಕುಮಾರ್, ಮುಖಂಡರಾದ ಹೆಚ್.ಎಸ್. ನಾಗರಾಜ್, ಎಂ. ಜಯಕುಮಾರ್, ಎಂ.ಟಿ. ಸುಭಾಷ್ಚಂದ್ರ, ಹುಚ್ಚಪ್ಪ ಮಾಸ್ತರ್, ಸರ್ಕಾರಿ ಅಭಿಯೋಜಕ ಎಸ್.ವಿ. ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

# ಅನುಮತಿ ಬೇಕಿಲ್ಲ

**(1ನೇ ಪುಟದಿಂದ)** 2019ರಂದು ತೀರ್ಪು ನೀಡಿದ್ದ ಮದ್ರಾಸ್ ಹೈ ಕೋರ್ಟ್, ಹೆದ್ದಾರಿಗಳ ನಿರ್ಮಾಣಕ್ಕಾಗಿ ಅಧಿಸೂಚನೆಗೆ ಮುಂಚೆ ಪರಿಸರ ಇಲಾಖೆಯ ಅನುಮತಿ ಪಡೆಯಬೇಕು ಎಂದು ತಿಳಿಸಿತ್ತು.

140 ಪುಟಗಳ ತೀರ್ಪು ನೀಡಿರುವ ನ್ಯಾಯಮೂರ್ತಿ ಖಾನ್ವಿಲ್ಕರ್, ಹೆದ್ದಾರಿ ನಿರ್ಮಾಣಕ್ಕಾಗಿ ಜಮೀನು ವಶಪಡಿಸಿಕೊಳ್ಳುವಾಗ ಪರಿಸರ ಇಲಾಖೆಯ ಅನುಮತಿ ಪಡೆಯಬೇಕೆಂದು 1956ರ ಕಾಯ್ದೆಯಲ್ಲಿ ತಿಳಿಸಿಲ್ಲ ಎಂದಿದ್ದಾರೆ.

ಆದರೆ, ರಸ್ತೆ ನಿರ್ಮಾಣ ಕಾರ್ಯವನ್ನು ಜಾರಿಗೆ ತರುವ ಸಂಸ್ಥೆ ಕಾಮಗಾರಿ ಆರಂಭಿಸುವುದಕ್ಕೆ ಮುಂಚೆ ಪರಿಸರ, ಇಲ್ಲವೇ ಅರಣ್ಯ ಇಲಾಖೆಯ ಅನುಮತಿ ಪಡೆಯಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ಹರಪನಹಳ್ಳಿಯಲ್ಲಿ ಭಾರತ್ ಬಂದ್ ಯಶಸ್ವಿ



ಹರಪನಹಳ್ಳಿ, ಡಿ.8- ಕೇಂದ್ರ ಸರ್ಕಾರ ಜಾರಿಗೊಳಿಸಿರುವ ವಿವಿಧ ತಿದ್ದುಪಡಿಗಳ ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ರೈತ ಸಂಘಟನೆಗಳು ಹಾಗೂ ವಿವಿಧ ಪ್ರಗತಿ ಪರ ಸಂಘಟನೆಗಳು ಕರೆ ನೀಡಿರುವ ಭಾರತ ಬಂದ್ ಹರಪನಹಳ್ಳಿಯಲ್ಲಿ ಯಶಸ್ವಿಯಾಯಿತು.

ಔಷಧಿ ಅಂಗಡಿಗಳು, ಸರ್ಕಾರಿ ಕಚೇರಿಗಳು, ಕೆಲವೊಂದು ಖಾಸಗಿ ವಾಹನಗಳು ಓಡಾಟ ನಡೆಸಿದ್ದರೆ ಅಂಗಡಿ ಮುಂಗಟ್ಟುಗಳು ಸಂಪೂರ್ಣ ಮುಚ್ಚಲ್ಪಟ್ಟಿದ್ದವು. ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಕಾರ್ಯಕರ್ತರು ಬೈಕ್‌ಗಳ ಮೇಲೆ ಪಟ್ಟಣದ ವಿವಿಧೆಡೆ ಸಂಚರಿಸಿ ಬಂದ್‌ಗೆ ಸಹಕರಿಸಲು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಎಂ.ಪಿ.ಪ್ರಕಾಶ್, ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ.ವೀಣಾ ಮಹಂತೇಶ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಸಮಾಜವಾದಿ ಜನತಾ ಪಾರ್ಟಿಯ ರಾಜ್ಯ ಉಪಾಧ್ಯಕ್ಷ ಡಿ.ಮಂಜಪ್ಪ ಮಾಡ್ಲಗೇರಿ, ವಿವಿಧ ಸಂಘಟನೆಗಳ ಮುಖಂಡರಾದ ಗುಡಿಹಳ್ಳಿ ಹಾಲೇಶ್, ಟಿ.ವಿ. ರೇಣುಕಮ್ಮ, ಇದ್ಲಿ ರಾಮಪ್ಪ, ಸಂದೇರ ಪರಶುರಾಮ, ಶೃಂಗಾರತೋಟದ ಬಸವರಾಜ್, ದ್ಯಾಮಜ್ಜಿ ಹನುಮಂತಪ್ಪ, ಗೌರಿಹಳ್ಳಿ ಹನುಮಂತಪ್ಪ, ಎಚ್.ಎಂ. ಸಂತೋಷ್, ಪುರಸಭಾ ಮಾಜಿ ಅಧ್ಯಕ್ಷೆ ಕವಿತಾ ವಾಗೀಶ್, ಶ್ರೀಕಾಂತ್ ಯಾದವ್, ಮಾಲತೇಶನಾಯ್ಕ, ಅರುಣ ಪೂಜಾರ, ಕಲ್ಲಹಳ್ಳಿ ಗೋಣೆಪ್ಪ, ಎ.ಡಿ.ದ್ವಾರಕೇಶ್, ಕುಂಚೂರು ಶಫಿವುಲ್ಲಾ ಹಾಗು ಇತರರು ಪಾಲ್ಗೊಂಡಿದ್ದರು.


॥ ಶ್ರೀ ಗಣೇಶಾಯ ನಮಃ ॥

**ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
ವಿನಾಯಕ ಪ್ಲಾಜಾ, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.

**23ನೇ ವಾರ್ಷಿಕ ಮಹಾಸಭೆಯ ನೋಟೀಸು**

ಸನ್ಮಾನ್ಯ ಸಂಘದ ಸದಸ್ಯರುಗಳೇ,

ದಿನಾಂಕ 19.12.2020ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ ದಾವಣಗೆರೆ ಪಿ.ಬಿ. ರಸ್ತೆ, ರೇಣುಕಾ ಬಡಾವಣೆಯಲ್ಲಿರುವ **ದೈವಜ್ಞ ಕಲ್ಯಾಣ ಮಂಟಪ**ದಲ್ಲಿ ಸಂಘದ 23ನೇ ವಾರ್ಷಿಕ ಮಹಾಸಭೆಯನ್ನು ಆಯೋಜಿಸಲಾಗಿದೆ. ತಾವೆಲ್ಲರೂ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ. ಈಗಾಗಲೇ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು, ತಲುಪದೇ ಇರುವ ಸದಸ್ಯರು ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ, ಸಭೆಗೆ ಹಾಜರಾಗಬೇಕಾಗಿ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ.

ಮಾನ್ಯ ಸದಸ್ಯರುಗಳು ಯಾವುದೇ ವಿಷಯದ ಬಗ್ಗೆ ತಾವು ನೀಡಲುದ್ದೇಶಿಸುವ ಸಲಹೆ-ಸೂಚನೆ ಮಾರ್ಗದರ್ಶನಗಳನ್ನು ಸಭೆ ನಡೆಯುವ ಮೂರು ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಸೊಸೈಟಿಯ ವ್ಯವಸ್ಥಾಪಕರಿಗೆ ಸಲ್ಲಿಸಬೇಕು.

ವಿಶೇಷ ಸೂಚನೆ : ಸದಸ್ಯರುಗಳು ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸಬೇಕು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕೆಂದು ವಿನಂತಿ.

'ಆಡಳಿತ ಮಂಡಳಿಯ ಪರವಾಗಿ'

**ಪ್ರಶಾಂತ್ ವಿ. ವೆರ್ಣೇಕರ್**
ಅಧ್ಯಕ್ಷರು

**ರಾಜೀವ್ ವಿ. ವೆರ್ಣೇಕರ್**
ಉಪಾಧ್ಯಕ್ಷರು


# ಭಾರತ್ ಬಂದ್ : ದೇಶಾದ್ಯಂತ ವಾಣಿಜ್ಯ ಚಟುವಟಿಕೆ ಸ್ತಬ್ಧ

**(1ನೇ ಪುಟದಿಂದ)** ಬಂದ್‌ಗೆ ಬೆಂಬಲಿಸಿದ್ದವು.

ರೈತರನ್ನು ಬೆಂಬಲಿಸಿ 50 ಸಾವಿರ ಸರ್ಕಾರಿ ನೌಕರರು ಸಾಮೂಹಿಕ ರಜೆ ಪಡೆದಿದ್ದಾರೆ ಎಂದು ಪಂಜಾಬ್ ಉದ್ಯೋಗಿಗಳ ಒಕ್ಕೂಟದ ಅಧ್ಯಕ್ಷ ಸಂಖಚೈನ್ ಖೈರಾ ತಿಳಿಸಿದ್ದಾರೆ. ಹರಿಯಾಣದಲ್ಲಿ ಪ್ರಮುಖ ಪ್ರತಿಪಕ್ಷಗಳಾದ ಕಾಂಗ್ರೆಸ್ ಹಾಗೂ ಐ.ಎನ್.ಎಲ್.ಡಿ.ಗಳು ಬಂದ್‌ಗೆ ಬೆಂಬಲಿಸಿದ್ದವು.

ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್, ಪ್ರತಿಪಕ್ಷಗಳಾದ ಕಾಂಗ್ರೆಸ್, ಎಡಪಕ್ಷಗಳು ಬಂದ್‌ಗೆ ಬೆಂಬಲ ನೀಡಿದ್ದವು. ಆದರೆ, ರಾಜ್ಯದಲ್ಲಿ ಬಂದ್‌ಗೆ ಭಾಗಶಃ ಪ್ರತಿಕ್ರಿಯೆ ದೊರೆತಿದೆ. ರೈಲ್ವೆ ಸಂಚಾರಕ್ಕೆ ಪ್ರತಿಭಟನಾಕಾರರು ಅಡ್ಡಿ ಪಡಿಸಿದ್ದರು. ಆದರೆ, ಬಸ್ ಹಾಗೂ ಟ್ಯಾಕ್ಸಿಗಳು ಎದಿನಂತೆ ಕಾರ್ಯ ನಿರ್ವಹಿಸಿವೆ.

ಕಾಂಗ್ರೆಸ್ ಆಡಳಿತದ ಛತ್ತೀಸ್‌ಘಡದಲ್ಲಿ ಬಂದ್ ಯಶಸ್ವಿಯಾಗಿತ್ತು. ಮಹಾರಾಷ್ಟ್ರದಲ್ಲಿ ಆಡಳಿತಾರೂಢ ಶಿವಸೇನೆ - ಎನ್‌ಸಿಪಿ - ಕಾಂಗ್ರೆಸ್‌ಗಳು ಬಂದ್‌ಗೆ ಬೆಂಬಲಿಸಿದ್ದವು. ಪ್ರಮುಖ ನಗರಗಳ ಸಗಟು ಮಾರುಕಟ್ಟೆಗಳು ಹಾಗೂ ಹಲವಾರು ಎಪಿಎಂಸಿಗಳು ಬಂದ್ ಆಗಿದ್ದವು.

ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಅವರು ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ರಾಲೆಗಣ ಸಿದ್ದಿ ಹಳ್ಳಿಯಲ್ಲಿ ದಿನವಿಡೀ ಉಪವಾಸ ನಡೆಸಿದರು.


**ಮನಿ ಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ-ಆಪ್, ನಿಯಮಿತ.,**
ಹೆಚ್.ಎಂ. ರಸ್ತೆ, ದಾವಣಗೆರೆ - 577001. ದೂ.: 08192-275566

ನೋಂದಣಿ ಕ್ರ.ಸಂ. ಎ.ಆರ್-31/ಆರ್‌ಜಿಎನ್/ಸೌಹಾರ್ದ ನೋಂದಣಿ/3067/2013-14 ದಿನಾಂಕ : 10.05.2013

**7ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್**

ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ-ಆಪ್ ನಿಯಮಿತ ದಾವಣಗೆರೆ, ಇದರ 7ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 24, ಡಿಸೆಂಬರ್ 2020 ರ ಗುರುವಾರದಂದು ಬೆಳಿಗ್ಗೆ 11.30 ಗಂಟೆಗೆ ಸಹಕಾರಿ ಆಡಳಿತ ಕಚೇರಿ ಆವರಣ ಎಚ್.ಎಂ ರಸ್ತೆ ದಾವಣಗೆರೆಯಲ್ಲಿ ಶ್ರೀ ಎಂ. ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಕಾರಣ ಮಾನ್ಯ ಸದಸ್ಯರು ಈ ಪ್ರಕಟಣೆಯನ್ನು ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್ ಎಂದು ಪರಿಭಾವಿಸಿ ಸಭೆಯಲ್ಲಿ ಹಾಜರಿರಲು ವಿನಂತಿ.

ಮಾನ್ಯ ಸದಸ್ಯರು ತಾವು ನೀಡಲುದ್ದೇಶಿಸುವ ಸಲಹೆ/ಸೂಚನೆಗಳನ್ನು ಸಭೆ ನಡೆಯುವ ಮೂರು ದಿನಗಳ ಮುಂಚಿತವಾಗಿ ಲಿಖಿತ ಮೂಲಕವಾಗಿ ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸಬೇಕು.

**ವಿಶೇಷ ಸೂಚನೆ:** ಕೋವಿಡ್ 19 ಇರುವುದರಿಂದ ಸದಸ್ಯರು ಮಾಸ್ಕ್ ಧರಿಸಬೇಕು ಹಾಗೂ ಕೋವಿಡ್ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

ಸ್ಥಳ : ದಾವಣಗೆರೆ
ದಿನಾಂಕ: 9.12.2020

ಆಡಳಿತ ಮಂಡಳಿಯ ಪರವಾಗಿ
**ಡಿ.ನಾಗರಾಜ್ ಮೂರ್ತಿ**
ವ್ಯವಸ್ಥಾಪಕ ನಿರ್ದೇಶಕರು

**ಆಡಳಿತ ಮಂಡಳಿ :**
**ಶ್ರೀ.ಎಂ. ವೀರಭದ್ರಯ್ಯ**, ಅಧ್ಯಕ್ಷರು **ಶ್ರೀ ಹೆಚ್.ಎಂ. ಈಶಪ್ರಸಾದ್**, ಉಪಾಧ್ಯಕ್ಷರು
**ನಿರ್ದೇಶಕರುಗಳು:** ಹೆಚ್.ಎಂ. ಜಯರಾಜು, ಎಸ್.ಹೆಚ್. ರಮೇಶ್, ಆರ್.ಎಂ. ರುದ್ರುಮುನಿ, ಜೆ.ಬಿ. ವಿಶ್ವನಾಥ್, ಎಂ.ಎಸ್.ಸೋಮಶೇಖರ್, ಟಿ.ಎಂ.ಗಿರೀಶ್, ಶ್ರೀಮತಿ ಶಶಿಕಲಾ ಮೂರ್ತಿ, ಶ್ರೀಮತಿ ಜ್ಯೋತಿಪ್ರಸಾದ್



**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರಾದ ದಾವಣಗೆರೆ ಸಿಟಿ, ಶಿವಕುಮಾರಸ್ವಾಮಿ ಬಡಾವಣೆ, 2ನೇ ಮೇನ್, 8ನೇ ಕ್ರಾಸ್, ಮೊದಲನೇ ಹಂತ, 'ಲಲಿತ ನಿವಾಸ' ಡೋರ್ ನಂ. 553/14ರಲ್ಲಿ ವಾಸವಾಗಿರುವ ಶ್ರೀ ಜಿ.ವಿ.ಸತ್ಯನಾರಯಣ ಶೆಟ್ಟಿ ತಂದೆ ಲೇಟ್ ವೆಂಕಟಾಚಲ ಶೆಟ್ಟಿ, ವಯಸ್ಸು ಸುಮಾರು 52 ವರ್ಷ, ವ್ಯಾಪಾರಸ್ಥರು ಆದ ಇವರು ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಕೊಗ್ಗನೂರು ಗ್ರಾಮದ ಜಿರಾಯ್ತಿ ಕಸುಬಿನ ಸುಮಾರು 40 ವರ್ಷದ ಶ್ರೀ ಎಂ.ಜಿ.ರವಿ ತಂದೆ ಎಂ.ಜಿ. ನಾಗೇಂದ್ರಪ್ಪ ಮತ್ತು ಅವರ ವಾರಸುದಾರರಿಂದ ಈ ಕೆಳಗಿನ ಅನುಸೂಚಿಯಲ್ಲಿ ತೋರಿಸಲಾಗಿರುವ ಸ್ಥಿರ ಸ್ವತ್ತನ್ನು ಕ್ರಯಕ್ಕೆ ಪಡೆಯುತ್ತಿದ್ದು ಈ ಸೊತ್ತಿಗೆ ಸಂಬಂಧಿಸಿದಂತೆ ಯಾರದಾದರು, ಯಾವುದೇ ರೀತಿಯಿಂದಲೂ ತಕರಾರು ಇದ್ದಲ್ಲಿ ಅವರುಗಳ ಈ ಭಾನುವಾರದೊಳಗೆ ಅಂದರೆ ದಿನಾಂಕ 13.12.2020 ರ ಒಳಗೆ ಈ ಕೆಳ ಕಾಣಿಸಿದ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ ತಮ್ಮಲ್ಲಿರುವ ಸಂದೇಹಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಮತ್ತು ತಮ್ಮಗಳ ಆಕ್ಷೇಪಣೆಗಳು ಏನಾದರೂ ಇದ್ದರೆ ಮೇಲೆ ತಿಳಿಸಿದ ದಿನಾಂಕದ ಒಳಗೆ ನಮ್ಮ ಕಕ್ಷಿದಾರರಿಗೆ ಅಥವಾ ಅವರ ಪರ ವಕೀಲರಿಗೆ ತಿಳಿಸಿ ತಮ್ಮ ತಕರಾರುಗಳನ್ನು ಬಗೆಹರಿಸಿಕೊಳ್ಳಬಹುದು. ನಂತರ ಬಂದ ಯಾವುದೇ ತಕರಾರುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಮತ್ತು ಯಾವುದೇ ಜವಾಬ್ದಾರಿಗಳಿಗೆ ಒಳಪಡುವುದಿಲ್ಲ ಮತ್ತು ಈ ಕೆಳಗಿನ ಷೆಡ್ಯೂಲ್ ಸ್ವತ್ತು ನಮ್ಮ ಕಕ್ಷಿದಾರರಿಗೆ ಶುದ್ಧ ಕ್ರಯ ಪತ್ರಕ್ಕೆ ಹಾಗೂ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನಕ್ಕೆ ಒಳಪಡುತ್ತದೆ ಎಂದು ಈ ಮೂಲಕ ತಿಳಿಯತಕ್ಕದ್ದು.

**:ಷೆಡ್ಯೂಲ್:**

ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟು, ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ನಿಟ್ಟುವಳ್ಳಿ ಗ್ರಾಮದ ರಿ.ಸ.ನಂ.15/3ರ ವಿಸ್ತೀರ್ಣ 2 ಎಕರೆ ಗುಂಟೆ 30ವುಳ್ಳ ಜಮೀನು ವಾಸೋಪಯೋಗಕ್ಕಾಗಿ ದಿನಾಂಕ 25.06.1995ರ ಆದೇಶದ ಪ್ರಕಾರ ಅಲಿನೇಷನ್ ಆಗಿದ್ದು ಸದರಿ ಪ್ರದೇಶದಲ್ಲಿ ವಿಂಗಡಿಸಿರುವ ಸೈಟ್‌ಗಳ ಪೈಕಿ ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆಯುತ್ತಿರುವ ಸೈಟ್ ನಂ.150 ಡೋರ್ ನಂ.1172 , ಚಾಲ್ತಿ ಮಹಾನಗರ ಪಾಲಿಕೆಯ ಡೋರ್ ನಂ.1172/150 ಅಳತೆ 30x40 ಅಡಿವುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ:
**ಪೂರ್ವಕ್ಕೆ:- ನಿವೇಶನ ನಂ.149, ಪಶ್ಚಿಮಕ್ಕೆ:- ನಿವೇಶನ ನಂ.151,**
**ಉತ್ತರಕ್ಕೆ:- 30 ಅಡಿ ಅಗಲದ ರಸ್ತೆ, ದಕ್ಷಿಣಕ್ಕೆ:- ನಿವೇಶನ ನಂ.161,**
ಮಧ್ಯದ ಸ್ವತ್ತು ಒಂದು ಕ್ರಯಕ್ಕೆ ಒಳಪಟ್ಟಿರುತ್ತದೆ.

ಕ್ರಯಕ್ಕೆ ಪಡೆಯುವವರ ಸಹಿ
**ಜಿ.ವಿ.ಸತ್ಯನಾರಾಯಣ ಶೆಟ್ಟಿ**
**ಮೊ: 99861 66985**

ವಕೀಲರ ಸಹಿ
**ಅಜಯ್ .ಸಿ. (ಎ.ಸಿ)** ವಕೀಲರು, ದಾವಣಗೆರ
**ಮೊ: 97430 19896**



# ನಗರದ ಸರ್ಕಾರಿ ಐಟಿಐ ಕಾಲೇಜು ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಣೆ

ದಾವಣಗೆರೆ,ಡಿ.8- ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಯಲ್ಲಿ ಆನ್ ಲೈನ್ ಮೂಲಕ ಭರ್ತಿಯಾಗಿ ಉಳಿದಿರುವ ಸೀಟುಗಳನ್ನು ಕ್ಯಾಜುಯಲ್ ರೌಂಡ್ - 2 ರಲ್ಲಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಮತ್ತು ಸ್ವೀಕರಿಸುವ ದಿನಾಂಕವನ್ನು ವಿಸ್ತರಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಐಟಿಐ ಕಾಲೇಜಿಗೆ ಭೇಟಿ ನೀಡಿ, ಇದೇ ದಿನಾಂಕ 14ರೊಳಗೆ ಅರ್ಜಿ ಸ್ವೀಕರಿಸಿ ಸಲ್ಲಿಸಬಹುದು ಎಂದು ಕಾಲೇಜಿನ ಪ್ರಾಂಶುಪಾಲರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೂಪ (36), ಮೆಕ್ಯಾನಿಕಲ್ ಡೀಸೆಲ್ (8), ಎಸ್.ಎಂ. ಡಬ್ಲ್ಯು (20), ವೆಲ್ಡರ್ (39), ಡಿ.ಎಂ.ಎಂ. (16), ಎಂ.ಆರ್.ಎ.ಸಿ. (8), ಎಂ.ಎಂ.ಟಿ.ಎಂ. (17), ಟರ್ನರ್ (5) ವೃತ್ತಿಗಳಲ್ಲಿ ಉಳಿದಿರುವ ಸೀಟುಗಳ ಭರ್ತಿಗೆ ಅವಕಾಶ ಕಲ್ಪಿಸಲಾಗಿದೆ.

# ಸಭಾದ ಹರಿಹರ ಯುವ ಘಟಕಕ್ಕೆ ನೇಮಕ




ಹರಿಹರ, ಡಿ.8- ಅಖಿಲ ಭಾರತ ವೀರಶೈವ ಮಹಾಸಭಾದ ಹರಿಹರ ತಾಲ್ಲೂಕು ಯುವ ಘಟಕದ ಅಧ್ಯಕ್ಷರಾಗಿ ವೀರಣ್ಣ ಓಬಜ್ಜಿಹಳ್ಳಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಜಿ.ಎಂ. ಪ್ರಶಾಂತ್ ಕುಮಾರ್ ನೇಮಕಗೊಂಡಿದ್ದಾರೆ.






# ಭೂ ಸುಧಾರಣಾ ಮಸೂದೆಗೆ ಪರಿಷತ್ ಒಪ್ಪಿಗೆ

**(1ನೇ ಪುಟದಿಂದ)** ಭೂಮಿ ಖರೀದಿಸಬಹುದಾಗಿದೆ.

ಜೆಡಿಎಸ್ ವಿಧೇಯಕದ ಪರವಾಗಿ ಮತ ಚಲಾಯಿಸಿದ್ದಕ್ಕೆ ಬಿಜೆಪಿ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಗೆ ಬಹುಮತ ಇದ್ದ ಕಾರಣ ಮಸೂದೆ ಅಲ್ಲಿ ಅಂಗೀಕಾರವಾಗಿತ್ತು. ಆದರೆ, 75 ಸದಸ್ಯರ ಪರಿಷತ್‌ನಲ್ಲಿ ಬಿಜೆಪಿ 31 ಸದಸ್ಯರನ್ನು ಹೊಂದಿದೆ. ಕಾಂಗ್ರೆಸ್ 28 ಹಾಗೂ ಜೆಡಿಎಸ್ 14 ಸದಸ್ಯರನ್ನು ಹೊಂದಿದೆ. ಒಬ್ಬರು ಸ್ವತಂತ್ರ ಸದಸ್ಯರಿದ್ದಾರೆ.

ರಾಜ್ಯ ಸರ್ಕಾರ ಮಂಡಿಸಿರುವ ಮಸೂದೆ ಶ್ರೀಮಂತರು ಹೂಡಿಕೆ ಹಾಗೂ ರಿಯಲ್ ಎಸ್ಟೇಟ್ ಉದ್ದೇಶಕ್ಕೆ ಕೃಷಿ ಜಮೀನು ಖರೀದಿಸಲು ಅಧಿಕಾರ ಕೊಡುತ್ತದೆ ಎಂದು ಕಾಂಗ್ರೆಸ್ ಹಾಗೂ ಹಲವಾರು ರೈತ ಸಂಘಟನೆಗಳು ಆಕ್ಷೇಪಿಸಿದ್ದವು.


**ಎನ್.ಟಿ.ಪಿ. ಶ್ರೀನಿತ್ಯ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್ .,**

ಪ್ರಧಾನ ಕಛೇರಿ : 26731ಎ, ಎಸ್.ಐ. ಆರ್ಕೇಡ್, ಮೊದಲನೇ ಮಹಡಿ, ಡೆಂಟಲ್ ಕಾಲೇಜ್ ರಸ್ತೆ, ದಾವಣಗೆರೆ-577 004.
**ದೂರವಾಣಿ : 08192-220588, ಮೊ. : 96638 13674, 96638 13675**

**7ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ**

ಮಾನ್ಯ ಸಹಕಾರಿ ಸದಸ್ಯರೇ, ಮೇಲ್ಕಂಡ ಸಹಕಾರಿಯ 2019-20ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ದಿನಾಂಕ : **13.12.2020ನೇ ಭಾನುವಾರ** ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ **ಎಸ್.ಐ. ಆರ್ಕೇಡ್, 2ನೇ ಮಹಡಿ, ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ-577 005.** ಇಲ್ಲಿ, ಸಹಕಾರಿಯ ವಿಶೇಷಾಧಿಕಾರಿಗಳಾದ **ಶ್ರೀ ನಟರಾಜ** ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿ ಪರವಾಗಿ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

**ವಿಶೇಷ ಸೂಚನೆ : ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದ ಸದಸ್ಯರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.**



**ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,**
ನಂ. 311, 'ಎ' ಬ್ಲಾಕ್, ಶ್ರೀ ಡಿ. ದೇವರಾಜ ಅರಸು ಬಡಾವಣೆ, ಪಿ.ಬಿ. ರಸ್ತೆ, ದಾವಣಗೆರೆ-577 006.
ದೂರವಾಣಿ ಸಂಖ್ಯೆ : 08192-237691, ಫ್ಯಾಕ್ಸ್ ಸಂಖ್ಯೆ : 08192-232202, ಇ-ಮೇಲ್ : mdddccbank@gmail.com

**ಪ್ರಕಟಣೆ**


ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ ಇದರ **2019-20ನೇ ಸಾಲಿನ '19ನೇ ವಾರ್ಷಿಕ ಮಹಾಸಭೆ'ಯನ್ನು** ಈ ವರ್ಷ ಕೋವಿಡ್-19 ಇರುವ ಪ್ರಯುಕ್ತ ಸರ್ಕಾರದ ಆದೇಶದಂತೆ ವರ್ಚುವಲ್ ಮೀಟಿಂಗ್ ನಡೆಸಲು ತೀರ್ಮಾನಿಸಲಾಗಿರುತ್ತದೆ. **ದಿನಾಂಕ 12-12-2020ರ ಶನಿವಾರ ಬೆಳಿಗ್ಗೆ 11-30ಕ್ಕೆ ಈ ವರ್ಚುವಲ್ ಸಭೆಯನ್ನು** ಆಯೋಜಿಸಲಾಗಿರುತ್ತದೆ. ಈ ವರ್ಚುವಲ್ ಸಭೆಗೆ ಈಗಾಗಲೇ ವಾರ್ಷಿಕ ವರದಿಗಳನ್ನು ಸದಸ್ಯ ಸಹಕಾರ ಸಂಘಗಳಿಗೆ ಕಳುಹಿಸಿಕೊಡಲಾಗಿರುತ್ತದೆ. ಒಂದು ವೇಳೆ ವಾರ್ಷಿಕ ವರದಿಗಳು ತಮ್ಮ ಸಹಕಾರ ಸಂಘಕ್ಕೆ ತಲುಪದೇ ಇದ್ದಲ್ಲಿ ಕೂಡಲೇ ನಿಮ್ಮ ಸಹಕಾರ ಸಂಘದ ಪ್ರತಿನಿಧಿಯ ಹೆಸರು ಮತ್ತು ವಾಟ್ಸಾಪ್ ಸಂಖ್ಯೆಯ ಮಾಹಿತಿಯನ್ನು ಈ ಕೆಳಕಂಡ ನಮೂನೆಯಲ್ಲಿ **ದಿನಾಂಕ 10-12-2020ರ ಒಳಗಾಗಿ ಮೊಬೈಲ್ ಸಂಖ್ಯೆ 7259025901** ಗೆ ಕಳುಹಿಸಿಕೊಡುವ ಮೂಲಕ ವರ್ಚುವಲ್ ಸಭೆಯಲ್ಲಿ ಭಾಗವಹಿಸಲು ಕೋರಿದೆ. ನೀವು ಕಳುಹಿಸುವ ಪ್ರತಿನಿಧಿಯ ವಾಟ್ಸಾಪ್ ಹೊಂದಿದ ಮೊಬೈಲ್ ಸಂಖ್ಯೆಗೆ ಐಡಿ ಸಂಖ್ಯೆ: (Link) ಕಳುಹಿಸಿಕೊಡಲಾಗುವುದು.

| ಸಹಕಾರ ಸಂಘದ ಹೆಸರು | ಸಹಕಾರ ಸಂಘದ ಪ್ರತಿನಿಧಿಯ ಹೆಸರು | ಪ್ರತಿನಿಧಿಯ ವಾಟ್ಸಾಪ್ ಹೊಂದಿದ ಮೊಬೈಲ್ ಸಂಖ್ಯೆ |
| --- | --- | --- |
| | | |

ಸದಸ್ಯ ಸಹಕಾರ ಸಂಘಗಳು ವರ್ಚುವಲ್ ಸಭೆಯಲ್ಲಿ ಭಾಗವಹಿಸಿ, ಸಹಕಾರ ನೀಡಬೇಕೆಂದು ಕೋರಿದೆ.

**ಮುಖ್ಯ ಕಾರ್ಯನಿರ್ವಹಣಾಧಿಕಾರಿ**
ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
ದಾವಣಗೆರೆ.

## ಬ್ರಿಟನ್ : ಮೊದಲ ಕೊರೊನಾ ಲಸಿಕೆ ಪಡೆದ 90ರ ವೃದ್ಧೆ



ಲಂಡನ್, ಡಿ. 8 - ಬ್ರಿಟನ್ ಅತಿ ದೊಡ್ಡ ಕೊರೊನಾ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿದ್ದು, ಮೊಟ್ಟ ಮೊದಲ ಲಸಿಕೆಯನ್ನು 90 ವರ್ಷದ ಮಾರ್ಗರೇಟ್ ಕೀನನ್ ಪಡೆದಿದ್ದಾರೆ. ಸಾರ್ವಜನಿಕ ಅಭಿಯಾನದ ಮೂಲಕ ಕೊರೊನಾ ಲಸಿಕೆ ಪಡೆದ ಮೊದಲ ಮಹಿಳೆಯೂ ಅವರಾಗಿದ್ದಾರೆ.

ಬೆಳಿಗ್ಗೆ 6.31ರ ಸಮಯದಲ್ಲಿ ಮಾರ್ಗರೇಟ್ ಅವರಿಗೆ ನರ್ಸ್ ಮೇ ಪ್ಯಾರ್ಸನಸ್ ಅವರು ಸ್ಥಳೀಯ ಕೊವೆಂಟ್ರಿ ಆಸ್ಪತ್ರೆಯಲ್ಲಿ ಲಸಿಕೆ ನೀಡಿದ್ದಾರೆ. ಇದರೊಂದಿಗೆ ಮಹತ್ವದ ಲಸಿಕಾ ಅಭಿಯಾನ ಆರಂಭವಾಗಿದೆ ಎಂದು ಬ್ರಿಟನ್ ತಿಳಿಸಿದೆ.

ಕೊರೊನಾ ಲಸಿಕೆ ಪಡೆದ ಮೊದಲ ವ್ಯಕ್ತಿ ನಾನಾಗಿರುವುದು ಸಂತೋಷ ತಂದಿದೆ. ಜನ್ಮ ದಿನದ ಕೊಡುಗೆ ಮೊದಲೇ ದೊರೆತಂತಾಗಿದೆ. ಇಡೀ ವರ್ಷ ಪ್ರತ್ಯೇಕವಾಗಿದ್ದ ನಾನು ಹೊಸ ವರ್ಷವನ್ನು ನನ್ನ ಕುಟುಂಬದವರು ಹಾಗೂ ಗೆಳೆಯರ ಜೊತೆ ಕಳೆಯುವ ನಿರೀಕ್ಷೆಯಲ್ಲಿದ್ದೇನೆ ಎಂದು ಮಾರ್ಗರೇಟ್ ಹೇಳಿದ್ದಾರೆ. ಮುಂದಿನ ವಾರ ಅವರು 91ನೇ ಹರೆಯಕ್ಕೆ ಕಾಲಿಡಲಿದ್ದಾರೆ.

ಆಭರಣ ಅಂಗಡಿಯ ಮಾಜಿ ಸಹಾಯಕಿಯಾಗಿದ್ದ ಅವರು, ಒಂಭತ್ತು ವರ್ಷಗಳ ಹಿಂದೆ ನಿವೃತ್ತರಾಗಿದ್ದಾರೆ. ಓರ್ವ ಪುತ್ರ ಓರ್ವ ಪುತ್ರಿ ಹಾಗೂ ನಾಲ್ವರು ಮೊಮ್ಮಕ್ಕಳನ್ನು ಹೊಂದಿರುವ ಅವರು, 21 ದಿನಗಳ ನಂತರ ನೀಡಲಾಗುವ ಬೂಸ್ಟರ್ ಡೋಸ್ ಪಡೆದ ನಂತರ ಮನೆಯಿಂದ ಹೊರಗೆ ಹೊರಡಲು ನಿರ್ಧರಿಸಿದ್ದಾರೆ.

ಕೊರೊನಾ ಅತಿ ಹೆಚ್ಚು ಅಪಾಯ ಇರುವವರಿಗೆ ಮೊದಲ ಕಂತಿನಲ್ಲಿ ಲಸಿಕೆ ನೀಡಲಾಗುತ್ತಿದೆ. 87 ವರ್ಷದ ಭಾರತೀಯ ಮೂಲದ ಬ್ರಿಟನ್ ನಾಗರಿಕರಾಗಿರುವ ಹರಿ ಶುಕ್ಲ ಅವರು ಮೊದಲ ಸುತ್ತಿನಲ್ಲಿ ಲಸಿಕೆ ಪಡೆದವರಲ್ಲಿ ಸೇರಿದ್ದಾರೆ.

ನಾವು ಕೊರೊನಾ ಮಹಾಮಾರಿಯ ಅಂತ್ಯದ ಹತ್ತಿರಕ್ಕೆ ಬರುತ್ತಿದ್ದೇವೆ ಎಂಬ ಆಶಾಭಾವನೆ ಇದೆ. ಲಸಿಕೆಯ ದಿಸೆಯಲ್ಲಿ ಸಾಧ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲು ಸಿದ್ಧನಿದ್ದೇನೆ ಎಂದು ಲಸಿಕಾ ಅಭಿಯಾನದ ಭಾಗವಾಗಿರುವ ಡಾ. ಶುಕ್ಲ ತಿಳಿಸಿದ್ದಾರೆ.

80 ವರ್ಷಕ್ಕಿಂತ ಹೆಚ್ಚಿನವರಿಗೆ ಬ್ರಿಟನ್‌ನಲ್ಲಿ ಲಸಿಕೆಯಲ್ಲಿ ಮೊದಲ ಆದ್ಯತೆ ನೀಡಲಾಗುತ್ತಿದೆ. ಆರೋಗ್ಯ ಕಾರ್ಯಕರ್ತರೂ ಸಹ ಮೊದಲ ಸುತ್ತಿನಲ್ಲಿ ಲಸಿಕೆ ಪಡೆಯಲಿದ್ದಾರೆ.

## ಹರಪನಹಳ್ಳಿ : ವಕೀಲರ ಸಂಘಕ್ಕೆ ಪುನರಾಯ್ಕೆ



ಹರಪನಹಳ್ಳಿ ಡಿ.8 - ಸ್ಥಳೀಯ ನ್ಯಾಯವಾದಿಗಳ ಸಂಘಕ್ಕೆ ಅಧ್ಯಕ್ಷರಾಗಿ ಕೆ.ಚಂದ್ರೇಗೌಡ್ರು, ಉಪಾಧ್ಯಕ್ಷರಾಗಿ ಟಿ.ವೆಂಕಟೇಶ್, ಕಾರ್ಯದರ್ಶಿ ಕೆ.ಬಸವರಾಜ್, ಜಂಟಿ ಕಾರ್ಯದರ್ಶಿ ಎಂ. ಮೃತ್ಯುಂಜಯ, ಖಜಾಂಚಿ ಕೆ. ಪ್ರಕಾಶ್, ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಫೀರ್ ಸಿ. ಅಹಮ್ಮದ್, ಕೆ. ಉಚ್ಚೆಂಗೆಪ್ಪ, ವಿ.ಹೂಲೆಪ್ಪ, ಎ.ಎಲ್. ರೇವಣಸಿದ್ದಪ್ಪ, ಎನ್. ನಂದೀಶ್ ಅವರುಗಳು ಅವಿರೋಧವಾಗಿ ಮರು ಆಯ್ಕೆಯಾಗಿದ್ದಾರೆ

ಈ ಸಂದರ್ಭದಲ್ಲಿ ವಕೀಲರುಗಳಾದ ಬಿ.ಕೃಷ್ಣಮೂರ್ತಿ, ಗಂಗಾಧರ್ ಗುರುಮಠ್, ಚಿಗಟೇರಿ ವೀರಣ್ಣ, ಪಿ.ಜಗದೀಶಗೌಡ. ಕೆ.ಜಗದಪ್ಪ ಕೆ. ಪ್ರಕಾಶ್, ವಿ.ಜಿ.ಪ್ರಕಾಶಗೌಡ, ಬಂಡ್ರಿ ಗೋಣಿಬಸಪ್ಪ, ಎಸ್.ಜೆ.ತಿಪ್ಪೇಸ್ವಾಮಿ, ಮುತ್ತಿಗಿ ಮಂಜುನಾಥ, ಬೇಲೂರು ಸಿದ್ದೇಶ್, ಡಿ,ಹನುಮಂತಪ್ಪ, ಒ.ಮುಜುಬುರ್, ಜಿ. ಮದ್ದಾನೆಪ್ಪ, ಬಿ.ಬಸವನಗೌಡ, ಆನಂದಪ್ಪ, ಮೆಹಬೂಬ್ ಬಾಷಾ, ಎಂ.ಮಲ್ಲಪ್ಪ,ಸುರೇಶ, ಟಿ.ಮಾರುತಿ, ತಿಪ್ಪೇಶ್ ಸೇರಿದಂತೆ ಇತರರು ಇದ್ದರು.

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮಂಡಳಿ ನಿರ್ದೇಶಕರಾಗಿ ಆರುಂಡಿ ನಾಗರಾಜ ನೇಮಕ



ಹರಪನಹಳ್ಳಿ, ಡಿ.8- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನಿರ್ದೇಶಕರ ಮಂಡಳಿಗೆ ಅಧಿಕಾರೇತರ ನಿರ್ದೇಶಕರನ್ನಾಗಿ ಪಟ್ಟಣದ ಆರುಂಡಿ ನಾಗರಾಜ್ ಅವರನ್ನು ನೇಮಕ ಮಾಡಲಾಗಿದೆ ಎಂದು ಸಾರಿಗೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ಸತ್ಯವತಿ ತಿಳಿಸಿದ್ದಾರೆ.

# ಎಸ್‌ಟಿ ಮೀಸಲಾತಿ ನೀಡದಿದ್ರೆ ಪ್ರಧಾನಿಯತ್ತ ಗಮನ

### ಹರಿಹರ : ಪಾದಯಾತ್ರೆ ಪೂರ್ವಭಾವಿ ಸಭೆಯಲ್ಲಿ ಕಾಗಿನಲೆ ಗುರುಪೀಠದ ಜಗದ್ಗುರು ನಿರಂಜನಾನಂದ ಸ್ವಾಮೀಜಿ



ಹರಿಹರ, ಡಿ.8- ಕುರುಬ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಬೆಳವಣಿಗೆಗೆ ಮಾತ್ರ ಎಸ್.ಟಿ. ಮೀಸಲಾತಿ ಹೋರಾಟ ಮಾಡುವುದಕ್ಕೆ ಮುಂದಾಗಿದ್ದೇವೆಯೇ ಹೊರತು, ಬೇರೆ ಯಾವುದೇ ಜನಾಂಗದ ವಿರುದ್ಧವಲ್ಲ ಎಂದು ಕಾಗಿನಲೆ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದ ಮಹಾಸ್ವಾಮೀಜಿ ತಿಳಿಸಿದ್ದಾರೆ.

ನಗರದ ಎಸ್.ಎಸ್.ಕೆ. ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಜ.15ರ ಮಕರ ಸಂಕ್ರಾಂತಿಯ ದಿನದಂದು ಕಾಗಿನಲೆ ಗುರುಪೀಠದ ಆವರಣದಿಂದ ಪ್ರಾರಂಭವಾಗುವ ಪಾದಯಾತ್ರೆ ನಿಮಿತ್ತವಾಗಿ ಇಂದು ಏರ್ಪಾಡಾಗಿದ್ದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಫೆ.7 ರಂದು ಬೆಂಗಳೂರಿನಲ್ಲಿ ನಡೆಯುವ ಬೃಹತ್ ಹೋರಾಟದ ಸಮಾವೇಶದಲ್ಲಿ ಸುಮಾರು 10 ಲಕ್ಷ ಸಮುದಾಯದ ಜನರನ್ನು ಒಟ್ಟಿಗೆ ಸೇರಿಸಿ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಅರ್ಪಿಸಲಾಗುತ್ತದೆ. ಒಂದು ವೇಳೆ ನಮ್ಮ ಸಮುದಾಯಕ್ಕೆ ಎಸ್.ಟಿ. ಮೀಸಲಾತಿ ನೀಡದೇ ಇದ್ದರೆ, ಮುಂದೆ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಗಮನ ಸೆಳೆಯುವ ಕೆಲಸವನ್ನು ಮಾಡಲಾಗುತ್ತದೆ ಎಂದು ಹೇಳಿದರು.

ಈ ಹೋರಾಟ ಹಲವಾರು ವರ್ಷಗಳ ಹಿಂದೆ ಆಗಬೇಕಾಗಿತ್ತು. ಹಿಂದೆ ಮಾಡಿರುವ ತಪ್ಪನ್ನು ಮುಂದೆ ಮಾಡುವುದು ಬೇಡ. ಸಮುದಾಯದ ಮಕ್ಕಳು ನಮಗೆ ಶಾಪವನ್ನು ಹಾಕಬಾರದು ಎಂಬ ಕಲ್ಪನೆ ಹೊಂದಿ ಎಸ್.ಟಿ. ಹೋರಾಟಕ್ಕೆ ಚಾಲನೆ ನೀಡಲಾಗಿದೆ. ನಮ್ಮ ಹೋರಾಟಕ್ಕೆ ಖಂಡಿತಾ ಫಲ ಸಿಗುತ್ತದೆ ಎಂಬ ಭರವಸೆ ಇದೆ ಎಂದರು.

ಹೊಸದುರ್ಗ ಕಾಗಿನಲೆ ಶಾಖಾ ಮಠದ ಶ್ರೀ ಈಶ್ವರಾನಂದ ಸ್ವಾಮೀಜಿ ಮಾತನಾಡಿದರು.

ಜಿಪಂ ಮಾಜಿ ಸದಸ್ಯ ಕೊಕ್ಕನೂರು ದ್ಯಾಮಪ್ಪ, ಎಂ. ನಾಗೇಂದ್ರಪ್ಪ, ಕುರುಬ ಸಮಾಜದ ಅಧ್ಯಕ್ಷ ಕೆ. ಜಡಿಯಪ್ಪ, ಹೋರಾಟ ಸಮಿತಿಯ ಮಂಜುನಾಥ್ ಮಾತನಾಡಿ, ನಮಗೆ ಹಿಂದೆ ಗುರು ಮತ್ತು ಗುರಿ ಎರಡೂ ಇರಲಿಲ್ಲ. ಆದರೆ ಈಗ ಒಳ್ಳೆಯ ಗುರುಗಳು ಸಿಕ್ಕಿದ್ದಾರೆ. ಮುಂದೆ ಗುರಿಯೂ ಇದೆ. ಆದ್ದರಿಂದ ಸಮುದಾಯದ ಬೆಳವಣಿಗೆಗೆ ನಾವು ಹೋರಾಟದ ಮೂಲಕ ನಮ್ಮ ಎಸ್.ಟಿ. ಮೀಸಲಾತಿ ಹಕ್ಕನ್ನು ಪಡೆಯಬೇಕಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಹಾದೇವಪ್ಪ ಒಡೆಯರ್ ನಾಗೇನಹಳ್ಳಿ, ದೂಡಾ ಅಧ್ಯಕ್ಷ ಶಿವಕುಮಾರ್, ಕುಣೆಬೆಳಕೆರೆ ದೇವೇಂದ್ರಪ್ಪ, ನಗರಸಭೆ ಮಾಜಿ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ವೈ.ಎನ್. ಮಹೇಶ್, ನಂದಿಗಾವಿ ಶ್ರೀನಿವಾಸ್, ಕುಂಬಳೂರು ವಿರುಪಾಕ್ಷಪ್ಪ, ಸಿ.ಎನ್. ಹುಲುಗೇಶ್, ವಿಜಯಮಹಾಂತೇಶ್, ಐರಣಿ ಅಣ್ಣಪ್ಪ, ಹಾಲಿವಾಣ ಪರಮೇಶ್ವರಪ್ಪ, ಶಿಕ್ಷಕ ಬೀರಪ್ಪ, ಪಿ.ಎಸ್. ಹನುಮಂತಪ್ಪ, ಎಂ. ಆರ್. ಚಂದ್ರಶೇಖರ್, ಸುರೇಶ್ ಚಂದಾಪೂರ್, ನಗರಸಭೆ ಸದಸ್ಯ ವಸಂತ್, ಮಲ್ಲೇಶ್ ಕಮಲಾ ಪುರ, ಜಿಗಳಿ ಮಂಜುನಾಥ್, ಮಂಜುನಾಥ್, ಚೂರಿ ಜಗದೀಶ್, ಕೆ.ಪಿ. ಗಂಗಾಧರ ಮಲೇಬೆನ್ನೂರು ಇತರರು ಹಾಜರಿದ್ದರು.

## ನ್ಯಾಯಾಧೀಶ ಸಾಬಪ್ಪ ಅವರಿಗೆ ಮುಂಬಡ್ತಿ



ದಾವಣಗೆರೆ,ಡಿ.8- ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆಗಿರುವ ನ್ಯಾಯಾಧೀಶ ಸಾಬಪ್ಪ ಅವರಿಗೆ ಜಿಲ್ಲಾ ನ್ಯಾಯಾಧೀಶರ ಹುದ್ದೆಗೆ ಮುಂಬಡ್ತಿ ನೀಡಿ ಆದೇಶಿಸಲಾಗಿದೆ.

ಸಾಬಪ್ಪ ಅವರಲ್ಲದೇ, ನಗರದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ ಇ. ಚಂದ್ರಕಲಾ, ಚನ್ನಗಿರಿ ಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿ.ವಿ. ಚಂದ್ರಶೇಖರ್ ಅವರುಗಳೂ ಜಿಲ್ಲಾ ನ್ಯಾಯಾಧೀಶರಾಗಿ ಮುಂಬಡ್ತಿ ಪಡೆದಿದ್ದಾರೆ.

ರಾಜ್ಯದ ಒಟ್ಟು 57 ನ್ಯಾಯಾಧೀಶರುಗಳಿಗೆ ಜಿಲ್ಲಾ ನ್ಯಾಯಾಧೀಶರ ಹುದ್ದೆಗೆ ಮುಂಬಡ್ತಿ ನೀಡಿ ರಾಜ್ಯಪಾಲರು ಇಂದು ಆದೇಶ ಹೊರಡಿಸಿದ್ದಾರೆ.

## 15ರ ನಂತರ ಅಯೋಧ್ಯೆ ಮಂದಿರದ ಅಡಿಪಾಯ



ಅಯೋಧ್ಯೆ, ಡಿ. 8 – ಅಯೋಧ್ಯೆ ರಾಮ ಜನ್ಮಭೂಮಿ ಮಂದಿರದ ಅಡಿಪಾಯ ಕಾಮಗಾರಿ ಇದೇ ದಿನಾಂಕ 15ರ ನಂತರ ಆರಂಭವಾಗಲಿದೆ. ಎರಡು ದಿನಗಳ ಕಾಲ ನಡೆದ ರಾಮ ಮಂದಿರ ನಿರ್ಮಾಣ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ದೇವಾಲಯ ನಿರ್ಮಾಣದಲ್ಲಿ ಭಾಗಿಯಾಗಿರುವ ಲಾರ್ಸೆನ್ ಅಂಡ್ ಟರ್ಬೋ, ಟಾಟಾ ಕನ್ಸಲ್ಟಿಂಗ್ ಇಂಜಿನಿಯರ್ಸ್ ಲಿಮಿಟೆಡ್, ಐಐಟಿ ಮದ್ರಾಸ್, ಐಐಟಿ ರೂರ್ಕಿ ಮತ್ತಿತರೆ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಡಿಸೆಂಬರ್ 15ರ ನಂತರ ದೇವಾಲಯದ ಅಡಿಪಾಯ ಕಾಮಗಾರಿ ಆರಂಭವಾಗಲಿದೆ. ಸುರಕ್ಷತಾ ಗೋಡೆಯ ನಿರ್ಮಾಣದ ಮೊದಲ ಹಂತದ ಕಾಮಗಾರಿಯೂ ಆರಂಭವಾಗಲಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಟ್ರಸ್ಟೀ ಅನಿಲ್ ಮಿಶ್ರ ಹೇಳಿದ್ದಾರೆ.

## ಹರಿಹರ ತಾಲ್ಲೂಕು ಪಂಚಾಯ್ತಿ ಉಪಾಧ್ಯಕ್ಷರಾಗಿ ಶಾಂತಮ್ಮ ಗದಿಗೆಪ್ಪ



ಹರಿಹರ, ಡಿ.8- ತಾಲ್ಲೂಕು ಪಂಚಾಯತಿ ಉಪಾಧ್ಯಕ್ಷರಾಗಿ ಶಾಂತಮ್ಮ ಗದಿಗೆಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯೂ ಆದ ದಾವಣಗೆರೆ ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡ್ರು ಘೋಷಿಸಿದ್ದಾರೆ.

ತಾಲ್ಲೂಕು ಪಂಚಾಯ್ತಿ ಉಪಾಧ್ಯಕ್ಷ ಸ್ಥಾನಕ್ಕೆ ಜಯಮ್ಮ ಬಸವಲಿಂಗಪ್ಪ ರಾಜೀನಾಮೆ ನೀಡಿದ್ದರ ಹಿನ್ನೆಲೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ತಾಲ್ಲೂಕು ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆಯಿತು.

ಉಪಾಧ್ಯಕ್ಷ ಸ್ಥಾನಕ್ಕೆ ಶಾಂತಮ್ಮ ಗದಿಗೆಪ್ಪ ಅವರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಾ.ಪಂ. ಅಧ್ಯಕ್ಷೆ ಶ್ರೀದೇವಿ ಮಂಜಪ್ಪ, ಮಾಜಿ ಉಪಾಧ್ಯಕ್ಷೆ ಜಯಮ್ಮ ಬಸವಲಿಂಗಪ್ಪ, ಸದಸ್ಯರಾದ ವೀರಭದ್ರಪ್ಪ ಆದಾಪುರ, ಸಿರಿಗೆರೆ ಕೊಟ್ರೇಶಪ್ಪ, ಎನ್.ಪಿ. ಬಸವಲಿಂಗಪ್ಪ ಕುಣೆಬೆಳಕೆರೆ, ಬಸವನಗೌಡ್ರು ಕೊಕ್ಕನೂರು, ವಿಶಾಲಾಕ್ಷಿ ಕೊಟ್ರೇಶಪ್ಪ ಭಾನುವಳ್ಳಿ, ಲಕ್ಷ್ಮಿ ಮಹಾಂತೇಶ್ ರಾಜನಹಳ್ಳಿ, ರತ್ನಮ್ಮ ರಂಗಪ್ಪ ಜಿಗಳಿ, ವೈ.ಹೆಚ್. ಭಾಗ್ಯಲಕ್ಷ್ಮಿ, ತಾ.ಪಂ. ಇಓ ಗಂಗಾಧರನ್, ಲಿಂಗರಾಜ್ ಇನ್ನಿತರರಿದ್ದರು.


18ನೇ ವರ್ಷದ ಪುಣ್ಯಸ್ಮರಣೆ



ದಿ|| ಶರಣ ಮಾಗನೂರು ರಾಜಶೇಖರಗೌಡ

ಜನನ: 10.02.1939 ಮರಣ: 09.12.2002

ಸದಾ ನಿಮ್ಮ ನೆನಪಿನಲ್ಲಿರುವ
ಶ್ರೀಮತಿ ಸುಲೋಚನ ಮಾಗನೂರು ರಾಜಶೇಖರಗೌಡ
ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
ಶ್ರೀ ಜಿ.ಎಂ.ಸಿದ್ದೇಶ್ವರ,
ಲೋಕಸಭಾ ಸದಸ್ಯರು ಹಾಗೂ ಮಾಜಿ ಕೇಂದ್ರ ಸಚಿವರು
ಹಾಗೂ ಸಹೋದರರು, ಭೀಮಸಮುದ್ರ
ಶ್ರೀ ಎಂ.ಬಿ.ಚನ್ನಬಸವನಗೌಡ ಮತ್ತು ಸಹೋದರರು
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಹಿತೈಷಿಗಳು

ವಾಣಿ ಹೋಂಡ
ಪ್ರಧಾನ ಕಛೇರಿ
ಪಿ.ಬಿ.ರಸ್ತೆ, ದಾವಣಗೆರೆ.

ಶಾಖಾ ಕಛೇರಿ
ಶಿವಮೊಗ್ಗ ರಸ್ತೆ, ಹೊನ್ನಾಳಿ.

ಶಾಖಾ ಕಛೇರಿ
ಬಸ್‌ಸ್ಟಾಂಡ್ ಹತ್ತಿರ, ಚನ್ನಗಿರಿ.

ಅಧಿಕೃತ ಸರ್ವಿಸ್ ಸೆಂಟರ್
ನಂದಿ ಪೆಟ್ರೋಲ್ ಬಂಕ್ ಎದುರು, ದಾವಣಗೆರೆ.

ಬಸವೇಶ್ವರ ವಿದ್ಯಾಸಂಸ್ಥೆ,
ಮಾಗನೂರು ರಾಜಶೇಖರ್ ಹಿರಿಯ ಪ್ರಾಥಮಿಕ ಶಾಲೆ
ತರಳಬಾಳು ಬಡಾವಣೆ, ದಾವಣಗೆರೆ.

ಎಂ.ಬಿ.ಏಜೆನ್ಸೀಸ್,
ಚನ್ನಗಿರಿ ರಸ್ತೆ, ದಾವಣಗೆರೆ.

ಪಾಲುದಾರರು ಹಾಗೂ ಸರ್ವ ಸಂಸ್ಥೆಗಳ ಸಿಬ್ಬಂದಿ ವರ್ಗದವರು





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte